# 47. ವ್ರತವೇ ಆತ್ಮವಿಜಯದ ಸಾಧನ

'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ' - ಎಂದರೆ ಮನುಷ್ಯನು ಮನವೆಂಬ ಪ್ರಾಣವುಳ್ಳವನೆಂದೂ, ಅವನು ಆ ಮನದ ದುರುಪಯೋಗ ಮಾಡಿಕೊಂಡರೆ ಪಾಪಕರ್ಮ ಬಂಧವಾಗುವುದೆಂದೂ, ಸದುಪಯೋಗ ಮಾಡಿಕೊಂಡರೆ ಪುಣ್ಯಕರ್ಮ ಬಂಧವಾಗುವುದೆಂದೂ, ಮನೋವ್ಯಾಪಾರ ರಹಿತನಾದರೆ ಶುದ್ಧ ಯೋಗಿಯೆನಿಸಿ, ಕರ್ಮನಿರ್ಜರೆಯಾಗಿ ಸಾಂಸಾರಿಕ ದುಃಖದಿಂದ ಬಿಡುಗಡೆಯಾಗಿ ಮೋಕ್ಷವನ್ನು ಹೊಂದುವನೆಂದೂ ಅರ್ಥವಾಗುವುದು. ಒಟ್ಟಿನಲ್ಲಿ ಬಂಧ ಮತ್ತು ಬಿಡುಗಡೆಗಳಿಗೆ ಕಾರಣೀಭೂತವಾದ ಮನವನ್ನು ಹೊತ್ತವನು ಮಾನವನೆಂದೂ ಗೊತ್ತಾಗುವುದು. ಇದರಿಂದ ಈ ಮಾನವ ಜನ್ಮಕ್ಕೆ ಎಲ್ಲ ಜನ್ಮಗಳಿಗಿಂತ ಹೆಚ್ಚಿನ ಪದವಿ ದೊರೆತಂತಾಯಿತು. ಮಿಕ್ಕೆಲ್ಲ ಜನ್ಮದಲ್ಲಿ ಬಂಧವೇ ಹೆಚ್ಚು, ನಿರ್ಜರೆ ಕಡಿಮೆಯಾಗುವುದಲ್ಲದೇ ಕರ್ಮದಿಂದ ಪೂರ್ಣ ವಿಮುಕ್ತಿಯಂತೂ ಇಲ್ಲವೇ ಇಲ್ಲ. ಮನದ ಸದುಪಯೋಗವೇ ಸುಖ, ದುರುಪಯೋಗವೇ ದುಃಖ. ಸುಖಕ್ಕೆ ಶಾಂತಿಯೇ ಮೂಲ, ದುಃಖಕ್ಕೆ ಆಶೆಯೇ ಮೂಲ ಎಷ್ಟೆಷ್ಟು ಮನಃಶಾಂತಿ ಯುಂಟಾಗುವುದೋ ಅಷ್ಟಷ್ಟು ಆತ್ಮನಿಗೆ ಸುಖ ಪ್ರಾಪ್ತವಾಗುವುದು. 'ಶಾಂತ ಮುಲೇಕಾ ಸೌಖ್ಯಮುಲೇದು' ಎಂಬಂತೆ ಶಾಂತಿಯು ಇಲ್ಲದೆ ಸೌಖ್ಯವಿಲ್ಲ. ಆಸೆ ಹೆಚ್ಚಾಗುತ್ತಾ ಆಗುತ್ತಾ ದುಃಖ ಹೆಚ್ಚಾಗುತ್ತಿರುತ್ತದೆ. ಅಂದರೆ ಆಸೆಯ ಬೆನ್ನು ಹತ್ತುವುದುರಿಂದ ತೃಪ್ತಿಯೆಂಬುದೇ ದೊರೆಯುವುದಿಲ್ಲ. ಮನದ ಆಸೆ ಎಂಬ ಆಳದ ಹಳ್ಳವನ್ನು ತುಂಬಲು ಪ್ರಪಂಚದಲ್ಲಿನ ಎಲ್ಲ ಸಾಮಗ್ರಿಯನ್ನು ತುಂಬಿದರೂ ಸಾಲದು. ಆದರೆ ಇದ್ದುದರಲ್ಲಿಯೇ ತೃಪ್ತಿ, ಸಹನೆ. ತಾಳ್ಮೆ ಹಾಗೂ ಸ್ವ-ಪರ ಜ್ಞಾನವೆಂಬ ವಿಚಾರಪರತೆಯಿಂದ, ಶಾಂತ ಮನೋಭಾವನೆಯಿಂದ ಸುಖದ ಅನುಭವವಾಗುವುದು.

ಈ ಜೀವನದಲ್ಲಿ ಬಯಸಿದ್ದೆಲ್ಲ ದೊರೆಯಬೇಕೆಂಬ ಬಯಕೆಯಿದ್ದರೂ ಅದಕ್ಕೆ ಹಿಂದೆ ಕೂಡಿಟ್ಟ ಪುಣ್ಯದ ಬಂಡವಾಳ ಇರಬೇಕು. ಅದನ್ನು ಸಂಪಾದಿಸಲು ಮನ, ಮಾತು, ಶರೀರಗಳ ಸದುಪಯೋಗವಾಗಿ ಸ್ವ-ಪರ ಹಿತ ಸಾಧನೆಗಾಗಿ ಶ್ರಮಿಸಬೇಕು. ಮನ ಮತ್ತು ಪಂಚೇಂದ್ರಿಯಗಳ ಮಿತಿಯಿಲ್ಲದ ಬಯಕೆಯನ್ನು ತಡೆಯಬೇಕು. ತನ್ನ ಜೀವನವನ್ನು ಒಂದು ಆದರ್ಶವಾದ ಚೌಕಟ್ಟಿನಲ್ಲಿ ನಡೆಸಬೇಕು.



ಈ ಆದರ್ಶವನ್ನು ಬಿತ್ತರಿಸಿದ ಭಗವಂತನ ಸ್ಮರಣೆಯನ್ನು ಮಾಡಬೇಕು. ಉಪದೇಶಕರಾದ ಗುರುವಿನ ಸೇವೆ ಮಾಡಬೇಕು, ಆದರ್ಶವನ್ನು ಬೋಧಿಸುವ ಶಾಸ್ತ್ರದ ಅಧ್ಯಯನ ಮಾಡಬೇಕು. ಹೀಗೆ ಈ ದೇವ, ಗುರು, ಶಾಸ್ತ್ರದ ಆಶ್ರಯದಿಂದ ಮನ, ವಚನ, ಕಾಯಗಳ ಕ್ರಿಯೆಯು ಸದುಪಯೋಗವಾಗಿ ಶುಭಯೋಗವೆನಿಸಿ ಪುಣ್ಯವೆಂಬ ಬಂಡವಾಳದ ಶೇಖರಣೆಯಾಗುತ್ತದೆ. ನಂತರವೇ ಮುಂದಿನ ಜೀಮಾನದಲ್ಲಿ ದೈಹಿಕ ಮಾನಸಿಕವಾದ ಸುಖ-ಶಾಂತಿಯನ್ನು ದೊರಕಿಸಿಕೊಡುತ್ತದೆ. ಈ ಬಂಡವಾಳವಿಲ್ಲದೆ ಸುಮ್ಮನೆ ಸುಖದ ಬಯಕೆ ಮಾಡಿದರೇನು ಫಲ? ಇದಕ್ಕೆ ರತ್ನಾಕರ ಕವಿ ಹೇಳಿದ್ದಾನೆ.

ಪುಣ್ಯಂಗೆಯ್ಯದೆ ಪೂರ್ವದೊಳ್ ಬರಿದೆ ತಾನೀಗಳ್ಮನಂ ನೋಡೆಲಾ ।
ಪುಣ್ಯಕ್ಕಾಭರಣಕ್ಕೆ ಭೋಗಕ್ಕೆ ನಸುರಾಗಕ್ಕೆ ಚಾಗಕ್ಕೆ ತಾ- ॥
ರುಣ್ಯಕ್ಕಗ್ಗದ ಲಕ್ಷ್ಮಿಗಂ ಬಯಸಿ ಬಾಯಂ ಬಿಟ್ಟು ಕಾಂಕ್ಷಾ ಮಹಾ- ।
ರಣ್ಯಂಬೊಕ್ಕಕಟೇಕೆ ಚಿಂತಿಸುವರೋ ರತ್ನಾಕರಾಧೀಶ್ವರಾ ॥

ಎಂಬಂತೆ ಹಿಂದೆ ಪುಣ್ಯವನ್ನು ಕೂಡಿಡದೆ ಈಗ ಸುಖ ಬಯಸಿದರೆ ಬಂದೀತೇ? ದೇಹಕಾಂತಿ ಬೇಕು, ಸೌಂದರ್ಯ ಬೇಕು. ಆಭರಣ ಬೇಕು, ಭೋಗಭಾಗ್ಯ ಬೇಕು, ಅನ್ಯರು ನನ್ನನ್ನು ಪ್ರೀತಿಸಬೇಕು, ಮುಗಿಯದ ಪ್ರಾಯ ಬೇಕು, ಕೈತುಂಬ ಹಣ ಬೇಕು, ಹಾಗಿರಬೇಕು, ಹೀಗಿರಬೇಕು, ಅವರಂತಾಗಬೇಕು, ಇವರಂತಾಗಬೇಕು ಎಂದು ಬಾಯಿ ಬಿಟ್ಟರೇನು ಫಲ? ಅಂತಹವನು ಹಿಂದೇಕೆ ಪುಣ್ಯವನ್ನು ಗಳಿಸಲಿಲ್ಲ? ಎಂದು ಬಯಕೆಯ ಬೆನ್ನು ಹತ್ತಿದ ಮಾನವರನ್ನು ಕಂಡು ಕವಿಯು ಪಶ್ಚಾತ್ತಾಪಪಟ್ಟಿದ್ದಾನೆ.

ಹೀಗೆ ಪುಣ್ಯಸಂಪಾದನೆ ಬೇಕು. ಅದರಿಂದ ಈ ಲೌಕಿಕ ಸುಖ ದೊರೆಯುತ್ತದೆ. ಎಂಬುದಂತೂ ನಿರ್ವಿವಾದ. ಈ ಲೌಕಿಕ ಸುಖಕ್ಕಿಂತಲೂ ಮಿಗಿಲಾದ ಪಾರ ಲೌಕಿಕವಾದ, ನೈಜವಾದ ಆತ್ಮಸೌಖ್ಯಕ್ಕೆ ಪುಣ್ಯದ ಅವಲಂಬನೆಯೇ ಬೇಕಿಲ್ಲ. ಅದಕ್ಕೆ ಮನ, ವಚನ, ಕಾಯಗಳ ಕ್ರಿಯೆಯನ್ನು ಸ್ಥಗಿತತೊಳಿಸಿ ಶುದ್ಧಯೊಗದಿಂದ ಆತ್ಮವೇ ತಾನಾಗಬೇಕು ಆತ್ಮಸುಖವೇ ಸುಖ. ಆತ್ಮಾನಂದವೇ ಆನಂದ. ಆತ್ಮಶಾಂತಿಯೇ ಶಾಂತಿ. ಅದೇ ನೈಜವೂ, ನಿರಾಬಾಧವೂ, ನಿತ್ಯವೂ ಆದ ಸುಖ. ಆದರೆ ಅಂತಹ ಪದವಿಯ ಪ್ರಾಪ್ತಿಯು ಈಗಂತೂ ಈ ದೇಶ, ಕಾಲ, ಸ್ಥಿತಿ, ವರ್ತಮಾನಗಳ ದೃಷ್ಟಿಯಿಂದ ಸಾಧ್ಯವಿಲ್ಲವಾದುದರಿಂದ ಆ ಜನ್ಮದ ಸಾಫಲ್ಯಕ್ಕಾಗಿ ಪುಣ್ಯವೆಂಬ ಬಂಡವಾಳವನ್ನು ಗಳಿಸಿ ಸ್ವರ್ಗಾದಿ ಉತ್ತಮ ಗತಿಯನ್ನು ಹೊಂದಿ

ಕ್ರಮವಾಗಿ ನೈಜಸುಖದ ಸನ್ನಿಧಿಯನ್ನು ತಲುಪಲು ಸಾಧ್ಯವಾಗುವುದು. ಅಥವಾ ''ನೇಮದಿ ಸುರರಾಗಿ ನಾಳೆ ಸೀಮಂಧರಸ್ವಾಮಿಯ ಕಾಣ್ಬರುತ್ತಮರು ಮುಂದೊಲಿದಪರಾಜಿತೇಶ್ವರನ ಕಾಣುವರು'' ಎಂದು ರತ್ನಾಕರ ಹೇಳಿರುವಂತೆ ಮುಂದಿನ ಗತಿಗಳಲ್ಲೇ ವಿದೇಹ ಕ್ಷೇತ್ರದಲ್ಲಿ ಹುಟ್ಟುವ ಯೋಗ ಪಡೆದುಕೊಳ್ಳಬಹುದು. ಅಂತೂ ಅಶುಭ ಯೋಗದಿಂದ ಅನ್ಯಾಯ, ಅನಾಚಾರದಿಂದ ಹಿಂಸಾದಿ ಪಾಪಕಾರ್ಯಗಳನ್ನು ಮಾಡಿ ನರಕಾದಿ ದುರ್ಗತಿಯನ್ನು ಹೊಂದುವುದು ಬೇಡ. ದೊರೆತ ಈ ಜನ್ಮದ ಸದುಪಯೋಗವಾಗಬೇಕೇ ವಿನಃ ದುರುಪಯೋಗವಾಗಬಾರದು.

ಜೀವನಿಗೆ ದುಃಖ ಪ್ರಾಪ್ತವಾಗುವುದು ಮೋಹದಿಂದ. ಮೋಹವು ಅಜ್ಞಾನದಿಂದ ಪ್ರಾಪ್ತವಾಗುವುದು. ಅಜ್ಞಾನವು ದುರಾಚಾರದಿಂದ ಪ್ರಾಪ್ತವಾಗುವುದು. ಇದರಿಂದ ದುರ್ಗತಿಯ ದುಃಖಪ್ರಾಪ್ತವಾಗುವುದು. ಹಾಗೆಯೇ ಸುಜ್ಞಾನ, ಸುವ್ರತ ಮತ್ತು ಶುಭ ಯೋಗದಿಂದ ಸುಖ ಪ್ರಾಪ್ತವಾಗುವುದು-ಈ ಸುಜ್ಞಾನ, ಸುವ್ರತ ಮತ್ತು ಶುಭಯೋಗಗಳು ಒಂದು ನಿಯಮಿತ ಜೀವನವನ್ನು ಸಾಗಿಸುವುದರಿಂದ ಲಭಿಸುತ್ತವೆ. ಅದರಿಂದಾಗಿ ಮಾನವ ಜೀವನದ ಸದುಪಯೋಗವಾಗಿ ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿಗಳು ದೊರೆಯಬೇಕಾದರೆ ಒಂದು ನಿಯಮಿತವಾದ ಹಾದಿಯಲ್ಲಿ, ನೈಜವಾದ ಮಾರ್ಗದಲ್ಲಿ ನೈತಿಕ ಪಥದಲ್ಲಿ ಸಾಗಿ ಹೋಗಬೇಕು.

ಹರಿದಾಡುವ ಮನಸ್ಸನ್ನು, ಪರದಾಡುವ ಇಂದ್ರಿಯಗಳನ್ನು, ತೂಕಾಡುವ ಶರೀರವನ್ನು, ಬಾಯಿತಪ್ಪಿದ ವಚನವನ್ನು ಹತೋಟಿಗೆ ತರುವ ಸಾಧನವೆಂದರೆ ವ್ರತ. ಪಂ. ಆಶಾಧರ ಸೂರಿಗಳು ತಮ್ಮ ಸಾಗಾರಧರ್ಮಾಮೃತದಲ್ಲಿ ವ್ರತದ ಸ್ವರೂಪವನ್ನು ಹೀಗೆ ನಿರೂಪಿಸಿದ್ದಾರೆ-

ಸಂಕಲ್ಪಪೂರ್ವಕಃ ಸೇವ್ಯೇ
ನಿಯಮೋಽಶುಭಕರ್ಮಣಃ।
ನಿವೃತ್ತಿರ್ವಾ ವ್ರತಂ ಸ್ಯಾದ್ವಾ
ಪ್ರವೃತ್ತಿಃ ಶುಭಕರ್ಮಣಿ॥

ಅಂದರೆ ಭೋಗ್ಯ ವಸ್ತುಗಳಾದ ಧನ, ಕನಕ, ವಸ್ತು, ವಾಹನ, ಪುತ್ರ, ಮಿತ್ರ, ಕಳತ್ರ, ಸೇವಕ ಮುಂತಾದುವುಗಳನ್ನು ಇಂತಿಷ್ಟು ಮಿತಿಯಲ್ಲಿ ಮಾತ್ರ ಭೋಗಿಸುತ್ತೇನೆ ಅಥವಾ ಇಂತಿಷ್ಟು ಕಾಲದವರೆಗೆ ಭೋಗಿಸುವುದಿಲ್ಲ. ಇಂತಹ ಭೋಗದ ತ್ಯಾಗವನ್ನೇ



ಮಾಡಿದ್ದೇನೆ ಎಂದೂ ಹಿಂಸೆ, ಅಸತ್ಯ, ಕಳ್ಳತನ, ಪರಸ್ತ್ರೀ ಅಥವಾ ಪುರುಷ ವ್ಯಾಮೋಹ, ಅತಿ ಆಸೆಗಳೆಂಬ ಪಾಪಕಾರ್ಯಗಳನ್ನು ನಿಯಮಬದ್ಧವಾಗಿ ತ್ಯಜಿಸಿ, ಜೀವನವನ್ನು ಸಾತ್ವಿಕ ರೀತಿಯಲ್ಲಿ ಸಾಗಿಸಿಕೊಂಡು ಹೋಗುತ್ತ ನಿಜವಾದ ದೇವ, ಶಾಸ್ತ್ರ, ಗುರುಗಳಲ್ಲಿ ಶ್ರದ್ಧಾ ಭಕ್ತಿ ಇಟ್ಟು ವರ್ತಿಸುವುದೇ ವ್ರತ. ಅಂದರೆ ದೊರೆತ ಭೋಗ ಭಾಗ್ಯಗಳನ್ನು ಭೋಗಿಸುವುದರಲ್ಲಿಯೇ ಮಗ್ನನಾಗಿ ಇಹ ಪರಗಳನ್ನು ಮರೆತು ಹಿಂಸಾದಿ ಅಕಾರ್ಯಗಳಲ್ಲಿ ಖರ್ಚು ಮಾಡುವುದಲ್ಲದೆ ಪಾಪಕಾರ್ಯದಲ್ಲಿ ಆಸಕ್ತನಾಗಿ ಉತ್ತರೋತ್ತರ ದುರ್ಗತಿಗೆ ಹೋಗುವುದು ಬೇಡ. ಇಂತಹ ಭೋಗ ಭಾಗ್ಯಗಳು ತನಗೆ ದೊರೆಯಬೇಕಾದರೆ ಹಿಂದೆ ಗಳಿಸಿದ ಪುಣ್ಯದಿಂದ ಎಂದು ತಿಳಿದು, ಮುಂದೆ ಇದಕ್ಕಿಂತಲೂ ಮಿಗಿಲಾದ ಸುಖ ಸಂಪದಗಳು ದೊರೆಯಲಿ ಮತ್ತು ಯಾವಾಗಲೂ ಖರ್ಚಾಗದೆ ಇರುವಂತಹ ನೈಜ ಸುಖ ಶಾಂತಿಗಳು ಈ ಆತ್ಮನಿಗೆ ಪ್ರಕಟವಾಗಲೆಂದು ತನ್ನ ಜೀವನವನ್ನು ಒಂದು ವ್ರತವೆಂಬ ಚೌಕಟ್ಟಿನಲ್ಲಿ ನಡೆಸಬೇಕು ಎಲ್ಲೆಮೀರಿ ಹೋಗುವ ಇಂದ್ರಿಯ ಮತ್ತು ಮನಸ್ಸನ್ನು ಒಂದು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬೇಕು. ಇವುಗಳಿಗೆ ತಾನು ದಾಸನಾಗದೆ ತನಗೆ ಅವು ಅಧೀನವಾಗಿರುವಂತೆ ಎಚ್ಚರಿಕೆ ವಹಿಸಿ ಬಾಳಬೇಕು. ಇಂತಹ ಆದರ್ಶ ಜೀವನವನ್ನು ಅಲ್ಪಕಾಲ ನಡೆಸಿದರೂ ಅದರಿಂದ ಅಮಿತ ಪುಣ್ಯಾರ್ಜನೆಯಾಗುವುದು. ಅಂದಮೇಲೆ ಆಜೀವನ ಪರ್ಯಂತ ಪಾಲಿಸುವುದರಿಂದ ಗಳಿಸುವ ಸುಖದ ಬುತ್ತಿ ಎಷ್ಟೆಂದು ಹೇಳಲು ಸಾಧ್ಯವಿಲ್ಲ. ಅದಕ್ಕೆ ರತ್ನಾಕರ ಕವಿ ಹೇಳಿದ್ದಾನೆ:-

ಅಣುಮಾತ್ರಂ ವ್ರತಮಲ್ಪಕಾಲಮಿರೆ ಮುನ್ನಂ ತತ್ಫಳಪ್ರಾಪ್ತಿಯಿಂ।
ಪ್ರಣುತಕ್ಷ್ಮಾಪತಿಯಾದೆನಿನ್ನದಿನಂ ಸಮ್ಯಗ್ವ್ರತಾಚಾರ ಲ।
ಕ್ಷಣಮಂ ಶಾಶ್ವತವಾಂತು ದೇವಪದಮಂ ಕೈವಲ್ಯಮಂ ಕೊಂಬೆನೆಂ।
ದೆಣಿಸುತ್ತುಜ್ಜಿಪಾತನೇ ಸುಖಿಯಲಾ ರತ್ನಾಕರಾಧೀಶ್ವರಾ॥

ಕಳೆದ ಭವದಲ್ಲಿ ಎಲ್ಲೋ ಸ್ವಲ್ಪಕಾಲ ವ್ರತವನ್ನಾಚರಿಸಿದ್ದರಿಂದ ಈಗ ರಾಜ, ಶ್ರೀಮಂತ, ನಿರೋಗಿ ಮತ್ತು ಸುಖಿಯಾಗಿರುವೆ. ಮುಂದಾದರೂ ಇದಕ್ಕಿಂತ ಹೆಚ್ಚಿನ ಸುಖ ಸಂಪದವನ್ನೂ, ದೇವೇಂದ್ರ, ಚಕ್ರವರ್ತಿ ಪದವಿಯನ್ನೂ ನಂತರ ನಿತ್ಯಸುಖದಾಯಕವಾದ ಮೋಕ್ಷವನ್ನೂ ಪಡೆಯಲು ವ್ರತ, ನೋಂಪಿಗಳನ್ನಾಚರಿಸು. ಇಂತಹ ವ್ರತಿಕನೇ ಸುಖಿ ಮತ್ತು ಧನ್ಯನೆಂದು ರತ್ನಾಕರ ಉಪದೇಶವಿತ್ತಿದ್ದಾನೆ.

ಹೀಗೆ ಹಿಂದೆ ಎಲ್ಲೋ ಸ್ವಲ್ಪ ವ್ರತಮಾಡಿ ಉತ್ತಮ ಗತಿ ಹೊಂದಿದವರ ಉದಾಹರಣೆಗಳು ಪುರಾಣದೊಳಗೆ ಬಹಳಷ್ಟು ಇವೆ. ಅವುಗಳಲ್ಲಿ ಕೆಲವೆಂದ್

ಮೃಗಸೇನನೆಂಬ ಒಬ್ಬ ಬೆಸ್ತನು ಓರ್ವ ಮುನಿವರ್ಯರ ಉಪದೇಶದಿಂದ ಪ್ರಭಾವಿತನಾಗಿ ಮೀನು ಹಿಡಿಯಲು ಬಲೆ ಬೀಸಿದಾಗ ಮೊದಲು ಸಿಕ್ಕಿದ ಮೀನನ್ನು ಬಿಟ್ಟು ಬಿಡುತ್ತೇನೆಂದು ವ್ರತ ಮಾಡಿದನು. ಅದರಂತೆ ಪಾಲಿಸಿದ ಮರುದಿನವೇ ಅವನ ಆಯುಷ್ಯ ಮುಗಿಯಿತು. ಒಂದೇ ದಿನ ಗುರುವಿನ ಮಾತನ್ನು ನಂಬಿ ನಿಷ್ಠೆಯಿಂದ ಪಾಲಿಸಿದ ಈ ಒಂದು ಸಣ್ಣ ವ್ರತದ ಮಹಿಮೆಯಿಂದ ಧನಕೀರ್ತಿ ಎಂಬ ಧನಿಕನಾಗಿ ಹುಟ್ಟಿ ಸುಖಿಯಾದನು.

ಮಾತಂಗನೆಂಬ ಒಬ್ಬ ಚಾಂಡಾಲನು ಕೇವಲ ಚತುರ್ದಶಿಯ ದಿನ ಮಾತ್ರ ಹಿಂಸೆಯನ್ನು ಮಾಡುವುದಿಲ್ಲವೆಂದು ಒಬ್ಬ ಮುನಿಗಳ ಹತ್ತಿರ ವ್ರತವನ್ನು ಕೈಗೊಂಡು ಆ ವ್ರತವನ್ನು ಬಿಡದೆ ಪಾಲಿಸಿ ರಾಜನಿಂದ ಗೌರವವನ್ನು ಪಡೆದನು ಮತ್ತು ದೇವತೆಗಳಿಂದ ಪೂಜಿತನೂ ಆದನು.

ಖದಿರಸಾರನೆಂಬ ಬೇಡನೊಬ್ಬನು ಓರ್ವ ಮುನಿಗಳ ಉಪದೇಶದಿಂದ ಪ್ರಭಾವಿತನಾಗಿ ಕೇವಲ ಕಾಗೆಯ ಮಾಂಸ ಒಂದನ್ನು ಮಾತ್ರ ತಿನ್ನುವುದಿಲ್ಲವೆಂದು ವ್ರತ ಮಾಡಿದನು. ಸಾಯುವ ಸಂದರ್ಭ ಬಂದರೂ ಈ ವ್ರತವನ್ನು ಬಿಡಲಿಲ್ಲ. ಈ ಪುಣ್ಯದ ಬಲದಿಂದ ಆತ ಸತ್ತ ನಂತರ ಸೌಧರ್ಮ ಸ್ವರ್ಗದಲ್ಲಿ ಹುಟ್ಟಿ ಅಲ್ಲಿನ ಸುಖಭೋಗವನ್ನು ಅನುಭವಿಸಿ ನಂತರ ಶ್ರೇಣಿಕರಾಜನಾಗಿ ಹುಟ್ಟಿದನು.

ಹೀಗೆ ಕೇವಲ ಅಲ್ಪ ಸ್ವಲ್ಪ ವ್ರತವನ್ನು ಪಾಲಿಸಿದರೆ ಉತ್ತಮ ಗತಿಯು ಪ್ರಾಪ್ತಿಯಾಗುತ್ತದೆಂದು ಮೇಲೆ ನಿಷ್ಠೆಯಿಂದ ನಿಯಮಬದ್ಧ ಜೀವನವನ್ನು ಸಾಗಿಸುತ್ತ ಶಾಸ್ತ್ರೋಕ್ತವಾದ ರೀತಿಯಲ್ಲಿ ವ್ರತ ಮತ್ತು ನೋಂಪಿಗಳನ್ನು ಆಚರಿಸಿದಲ್ಲಿ ಪುಣ್ಯಬಂಧವೂ ಮೋಕ್ಷಕ್ಕೆ ಕಾರಣವೂ ಆಗುವುದರಲ್ಲಿ ಸಂದೇಹವಿಲ್ಲ. ವ್ರತವು ಆತ್ಮ ಸಂಸ್ಕಾರದ ಸಾಧನವೂ ಆಗಿದೆ.

ಮನ ಮತ್ತು ಇಂದ್ರಿಯಗಳ ಅತಿಯಾದ ಇಚ್ಛೆಯಿಂದ ಆಗುವ ಅನಾಹುತವನ್ನು ತಡೆಯಲು ಹಾಕಿಕೊಳ್ಳುವ ನಿಯಮವೇ ವ್ರತ. ವ್ರತವೆಂಬುದು ಬಸ್ಸಿಗೆ ಬ್ರೆಕ್ ಇದ್ದಂತೆ ಮನ ಮತ್ತು ಇಂದ್ರಿಯಗಳ ವಾಸನೆ ಅಥವಾ ಇಚ್ಛೆ ಯನ್ನು ಎದುರಿಸಿ ಅಥವಾ ತಡೆದು, ಆತ್ಮಚೈತನ್ಯದ ಸದುಪಯೋಗ ಮಾಡಿ ಕೊಳ್ಳಲು ವ್ರತವೆಂಬ ಸಾಧನೆಯೇ ಬೇಕು. ಎಷ್ಟೆಷ್ಟು ವ್ರತ ನಿಯಮ ಪಾಲನೆಯನ್ನು ಜೀವನದಲ್ಲಿ ಸಾಧಿಸಲು ಸಾಧ್ಯವೋ ಅಷ್ಟಷ್ಟು ಆತ್ಮಚೈತನ್ಯ ಪ್ರಕಟವಾಗುವುದು. ಅಹಿತಕಾರ್ಯವನ್ನು ಬಿಟ್ಟು ಆತ್ಮ ಹಿತವಾದ ಕಾರ್ಯವನ್ನು ಮಾಡುವುದು ವ್ರತದ ಉದ್ದೇಶವಾಗಿದೆ. ಈ ವ್ರತಪಾಲಕನು ಶಲ್ಯರ ಹಿತನಾರಬೇಕೆಂದು ಉಮಾಸ್ವಾಮಿಗಳು



ಹೇಳಿದ್ದಾರೆ. ಶಲ್ಯವೆಂದರೆ ಮುಳ್ಳು ಅಥವಾ ಚುಚ್ಚುವ ಸಾಧನ. ಶಾರೀರಿಕ ಮತ್ತು ಮಾನಸಿಕ ದುಃಖವನ್ನುಂಟು ಮಾಡುವ ಮಾಯಾ, ಮಿಥ್ಯಾ, ನಿದಾನವೆಂಬ ಮುಳ್ಳಿನಂತಹ ಸಂಕ್ಲೇಶ ಪರಿಣಾಮ ಉಳ್ಳವರು ವ್ರತಿಕರೆನಿಸುವುದಿಲ್ಲ. ಕಪಟ, ವಂಚನೆ, ಅಜ್ಞಾನ, ದುರಾಶೆಗಳಿಗೆ ಒಳಗಾಗದೆ ಮಾಡುವ ನಿಯಮವೇ ವ್ರತವೆನಿಸುವುದು. ವ್ರತವು ಯಮವೆಂದೂ ನಿಯಮವೆಂದೂ ಎರಡು ವಿಧವುಂಟು. ಭೋಗವಸ್ತುಗಳ ತ್ಯಾಗ ಮತ್ತು ಆತ್ಮಹಿತಸಾಧಕವಾದ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹ ಮುಂತಾದ ವ್ರತಗಳನ್ನು ಆಜನ್ಮ ಪರ್ಯಂತ ಮಾಡುವುದಕ್ಕೆ ಯಮ ವೆಂತಲೂ, ಕೆಲವನ್ನು ಇಂತಿಷ್ಟು ಕಾಲದ ವರೆಗೆ ಮಾತ್ರವೆಂದು ಅನುಸರಿ ಸುವುದಕ್ಕೆ ನಿಯಮವೆಂತಲೂ ಕರೆಯುತ್ತಾರೆ. ಯಮವ್ರತವಾಗಲೀ ನಿಯಮ ವ್ರತವಾಗಲೀ ಶಕ್ತಿಗೆ ತಕ್ಕಂತೆ ದೇಶ, ಕಾಲ, ಸ್ಥಿತಿಗಳನ್ನು ನೋಡಿಕೊಂಡು ಪಾಲಿ ಸುವುದುತ್ತಮ ಆರಂಭಶೂರತ್ವದಿಂದ ಮೊದಲು ಮೊದಲು ಉತ್ಸಾಹದಿಂದ ಮಾಡುತ್ತ ಅದು ಕಷ್ಟವೆನಿಸಿ, ಮನೋದೌರ್ಬಲ್ಯದಿಂದ ಕೈಬಿಡುವುದಕ್ಕಿಂತ ಮೊದಲೇ ತನ್ನ ಶಕ್ತಿಗೆ ತಕ್ಕಂತೆ ಪಾಲಿಸಿಕೊಂಡು ದೇವ, ಗುರು, ಶಾಸ್ತ್ರಗಳಲ್ಲಿ ದೃಢತರವಾದ ನಂಬಿಕೆ ಇಟ್ಟು, ಸುಜ್ಞಾನಿಯಾಗಿ ಸದಾಚಾರದಿಂದ ವರ್ತಿಸುವುದು ಉತ್ತಮ. ದೃಢ ನಂಬಿಕಸ್ಥ ಮತ್ತು ಸುಜ್ಞಾನಿಯಾದವನು ಹಿಡಿದ ವ್ರತವನ್ನು ಏನೇ ಆತಂಕ ಬಂದರೂ ಬಿಡದೆ ಪಾಲಿಸುತ್ತಾನೆ.

ಶಕ್ತಿಗೆ ತಕ್ಕಂತೆ ಪಾಲಿಸಲೆಂದೇ ಅಣುವ್ರತವೆಂದೂ ಮಹಾವ್ರತವೆಂದೂ ವಿಂಗಡಿಸಿದ್ದಾರೆ. ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳ ಪಾಲನೆಯನ್ನು ಗೃಹಸ್ಥನು ಅಂಶರೂಪದಲ್ಲಿ ಪಾಲಿಸುತ್ತಾನಾದ್ದರಿಂದ ಅದಕ್ಕೆ ಅಣುವ್ರತವೆಂದೂ, ಮುನಿಗಳು, ತ್ಯಾಗಿಗಳು ಅವನ್ನೇ ಪೂರ್ಣರೂಪವಾಗಿ ಶಕ್ತಿ ಮೀರಿ ಪಾಲಿಸುತ್ತಾರಾದುದರಿಂದ ಅವಕ್ಕೆ ಮಹಾವ್ರತವೆಂದೂ ಹೆಸರು.

ಅಂದಂದು ಮಾಡಿದ ಪಾಪವೆಂಬ ಮಲವನ್ನು ನಿವಾರಣೆ ಮಾಡಿಕೊಂಡು ಸದಾ ಸತ್ಪರಿಣಾಮದಿಂದಿದ್ದು ಸದ್ಗತಿಗೆ ಸಾಗಲು ಶ್ರಾವಕರಿಗೆ ದೇವ ಪೂಜೆ, ಗುರುಸೇವೆ, ಸ್ವಾಧ್ಯಾಯ, ಇಂದ್ರಿಯನಿಗ್ರಹ, ತಪ ಮತ್ತು ದಾನ ಎಂಬ ಸತ್ ಕ್ರಿಯೆಗಳನ್ನು ಹೇಳಿದ್ದಾರೆ. ಹಾಗೂ ಪರ್ವತಿಥಿಗಳಲ್ಲಿ ಉಪವಾಸಾದಿಗಳನ್ನು ಮಾಡುವ ನಿಯಮವನ್ನು ನಿರೂಪಿಸಿದ್ದಾರೆ. ಇವೆಲ್ಲ ಮನ ಮತ್ತು ಇಂದ್ರಿಯಗಳನ್ನು ನಿಗ್ರಹಿಸಿ, ಆತ್ಮೋನ್ನತಿಯನ್ನು ಹೊಂದುವ ಸಾಧನೆಗಳಾಗಿವೆ. ವ್ರತಪಾಲನೆಯೆಂದರೆ ಸದ್ಗತಿಗೆ ಪ್ರಯಾಣ ಮಾಡಲು ಕೊಂಡುಕೊಳ್ಳುವ ಟಿಕೆಟ್ ಅಥವಾ ಪರವಾನಗಿ ಎನ್ನಬಹುದು.

ಈ ವ್ರತ ನಿಯಮಪಾಲನೆ ಇಲ್ಲದೆ ಸುಮ್ಮನೆ ಸುಖಶಾಂತಿ ಹೇಗೆ ದೊರಕೀತು? ಅದಕ್ಕೆ ಕವಿ ರತ್ನಾಕರ ಹೇಳಿದ್ದಾರೆ-

ಓದಿದ ತತ್ವಮಿಲ್ಲ ಪರಿದಿಟ್ಟ ಪರಿಗ್ರಹಮಿಲ್ಲ ತಗ್ಗಿತಂ- ।
ಪಾದ ಕಷಾಯಮಿಲ್ಲ ನೆರೆ ಗೆಲ್ಲದ ಪರೀಷಹಮಿಲ್ಲ ಸದ್ಗುಣಾ ॥
ಮೋದತೆಯಿಲ್ಲ ಮಾಡಿದುರು ಧರ್ಮವಿಕಾಸತೆ ಇಲ್ಲ ನಿಮ್ಮೊಳ- ।
ತ್ಯಾದರಭಕ್ತಿ ಇಲ್ಲ ಸುಖಿ ಯಾಗುವೆನೆಂತಪರಾಜಿತೇಶ್ವರಾ ॥

ಶಾಸ್ತ್ರಜ್ಞಾನವಿಲ್ಲದೆ, ಬಾಹ್ಯಾರಂಭ ಪರಿಗ್ರಹಗಳನ್ನು ತೊರೆಯದೆ, ಕ್ರೋಧಾದಿ ಕಷಾಯಗಳನ್ನು ಬಿಡದೆ, ದಾನ ಧರ್ಮ ಪರೋಪಕಾರಾದಿಗಳನ್ನು ಮಾಡದೆ, ದೈವಭಕ್ತಿ, ಗುರುಸೇವೆ, ವ್ರತ, ನೋಂಪಿಗಳನ್ನು ಆಚರಿಸದೆ ಸುಖ ದೊರೆಯುವುದಿಲ್ಲ.

ಹೀಗೆ ಸುಖ ಶಾಂತಿಯ ಸಾಧನೋಪಾಯಗಳಾದ ವ್ರತ ನಿಯಮಾದಿಗಳ ಪಾಲನೆಯಿಂದ ಜೀವನವು ಪಾವನವಾಗಿ ಪರಮಪಾವನವಾದ ಪದವಿ ಪಡೆಯಬಹುದು. ಆದರಿಂದ ವ್ರತವೇ ಆತ್ಮ ವಿಜಯದ ಸಾಧನ.

## 48. ಪರಂಜ್ಯೋತಿ

ಪರಂ ಎಂದರೆ ಆವರಣವಿಲ್ಲದ ಶ್ರೇಷ್ಠವಾದ ಜ್ಯೋತಿ ಎಂದರೆ ಜ್ಞಾನ. ಪರಂಜ್ಯೋತಿ ಎಂದರೆ ಶ್ರೇಷ್ಠವಾದ ಸುಜ್ಞಾನ ದೀವಿಗೆ.

ಜಗತ್ತಿನಲ್ಲಿ ಬೆಳಕನ್ನು ಕೊಡುವ ಸಾಧನಗಳು ಬಹಳ ಇವೆ. ಅವುಗಳಲ್ಲಿ ಸೂರ್ಯನೇ ಮುಂತಾಗಿ ಮಿಣುಕು ಹುಳುಗಳವರೆಗೆ ಸಮಾವೇಶವಾಗಿವೆ. ಆದರೆ ಅವಾವಕ್ಕೂ ಈ ಪರಂಜ್ಯೋತಿ ಎಂಬ ಹೆಸರು ಬಂದಿಲ್ಲ. ಕಾರಣ ಅವೆಲ್ಲಕ್ಕೂ ಆವರಣ ಉಂಟು. ಅವುಗಳಿಂದ ಬರುವ ಬೆಳಕು ಒಂದು ಅವಧಿಗೆ ಒಳಪಟ್ಟು ಸೀಮಿತವಾಗಿದೆ. ಹಗಲಲ್ಲಿ ಮಾತ್ರವೇ ಸೂರ್ಯನ ಬೆಳಕು. ಒಂದು ಪಕ್ಷದಲ್ಲಿ ಕೆಲವೇ ರಾತ್ರಿಗಳಲ್ಲಿ ಮಾತ್ರ ಚಂದ್ರನ ಬೆಳಕು. ಎಣ್ಣೆ ಬತ್ತಿಗಳಿದ್ದಲ್ಲಿ ಮಾತ್ರ ದೀಪದ ಬೆಳಕು. ಯಾವುದಕ್ಕೂ ಉಪಯೋಗವಿಲ್ಲದ ಮಿಣುಕು ಹುಳುವಿನ ಬೆಳಕು.



ಹಲವಾರು ರತ್ನಗಳು ಸ್ವಯಂಪ್ರಕಾಶಿತವಾಗಿದ್ದರೂ ಅವು ಮಲಿನವಾಗಿ ಗಾರಾದರೆ ಪ್ರಕಾಶಿಸಲಾರವು. ಕರೆಂಟ್ ಇದ್ದರೆ ಮಾತ್ರ ಬೆಳಗುವ ವಿದ್ಯುದ್ದೀಪ. ಹೀಗಾಗಿ ಈ ಎಲ್ಲ ಬೆಳಕಿನ ಉಗಮಗಳು ಪರಂ ಅಥವಾ ಶ್ರೇಷ್ಠವೆನಿಸಲಾರವು.

ಅಂದ ಮೇಲೆ ಆ ಪರಂಜ್ಯೋತಿ ಯಾವುದು? ಎಂದು ಕೇಳುವುದಾದರೆ ಅದೇ ಸುಜ್ಞಾನ ಪ್ರಕಾಶ. ಈ ಸುಜ್ಞಾನ ಪ್ರಕಾಶವು ಎಲ್ಲಿ ಉಗಮವಾಗುವುದೆಂದರೆ ತೀರ್ಥಂಕರ ಪರಮ ಜಿನೇಂದ್ರರಿಂದ. ಇವರ ಅತೀಂದ್ರಿಯವಾದ ಅನಂತಜ್ಞಾನದಲ್ಲಿ ಲೋಕಾಲೋಕದಲ್ಲಿನ ಸಂಪೂರ್ಣ ಪದಾರ್ಥಗಳೂ ಮತ್ತವುಗಳ ಭೂತ, ಭವಿಷತ್, ವರ್ತಮಾನ ಕಾಲಗಳಲ್ಲಾಗುವ ಅನಂತಗುಣ ಪರ್ಯಾಯಗಳೊಂದಿಗೆ ಒಮ್ಮೆಲೇ ಗೋಚರವಾಗುತ್ತವೆ. ಆದುದರಿಂದಲೇ ಇಂತಹ ಅನುಪಮವಾದ ಪರಮಾತ್ಮನೇ ಪರಂಜ್ಯೋತಿ ಎನಿಸುತ್ತಾನೆ. ಈ ಪರಂಜ್ಯೋತಿಯು ವೀತರಾಗನೂ, ಸರ್ವಜ್ಞನೂ, ಹಿತೋಪದೇಶಿಯೂ ಆಗಿ 'ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೇ' ಎಂಬ ಗುಣಕ್ಕೆ ಸಾಕ್ಷೀಭೂತನಾಗಿದ್ದಾನೆ.

ಈ ಪರಂಜ್ಯೋತಿಯ ಸುಜ್ಞಾನಕ್ಕೆ ಸೀಮಿತವಿಲ್ಲ. ಒಂದು ಎಲ್ಲೆಕಟ್ಟಿಲ್ಲ. ಒಂದು ಅವಧಿಗೆ ಒಳಪಟ್ಟಿಲ್ಲ. ಒಂದು ದೇಶ ಕಾಲಕ್ಕೆ ಮಾತ್ರ ಸಂಬಂಧಿಸಿಲ್ಲ. ಯಾವ ಆವರಣವೂ ಇಲ್ಲ. ಅವರ ಜ್ಞಾನದಲ್ಲಿ ಮೂರು ಲೋಕವೂ ಅಡಗಿದೆಯಾದುದರಿಂದ ಅವರ ಪ್ರಕಾಶ ವಿಶ್ವವ್ಯಾಪಿಯಾದುದು. ಇದರಿಂದಲೇ ಈ ಪರಂಜ್ಯೋತಿಗೆ ವಿಷ್ಣುವೆಂದೂ ಹೆಸರುಂಟು. ಬ್ರಹ್ಮ ಎಂದರೆ ಜ್ಞಾನ. ಜ್ಞಾನವೇ ತಾನಾದ ಸರ್ವಜ್ಞನಾದುದರಿಂದ ಬ್ರಹ್ಮನೆಂತಲೂ ಹೆಸರುಂಟು. ಈ ಪರಂಜ್ಯೋತಿಯು ಸತ್ಯಾರ್ಥ ಪ್ರಕಾಶಕವಾದುದೂ, ಆ ಪ್ರಕಾಶದಲ್ಲಿ ವಿಹರಿಸುವವರಿಗೆ ಶಾಂತಿ ದೊರಕುತ್ತದಾದ್ದರಿಂದ ಈ ತೀರ್ಥೇಶನಿಗೆ ಶಿವನೆಂದೂ ಹೆಸರುಂಟು. ಈ ಸತ್ಯವೂ, ನಿತ್ಯವೂ ಆದ ಪರಂಜ್ಯೋತಿಯನ್ನು ರತ್ನಾಕರ ಕವಿ-

'ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ।
ಕಿರಣ ಸುಜ್ಞಾನ ಪ್ರಕಾಶ॥

ಎಂದು ಆ ಮಹಾಮಹಿಮ ಭಗವಂತನ ದಿವ್ಯಜ್ಞಾನವೇ ಪರಂಜ್ಯೋತಿ ಎಂದೂ, ಅದು ಕೋಟಿ ಕೋಟಿ ಸೂರ್ಯ ಚಂದ್ರರ ಪ್ರಭೆಗೂ ಮಿಗಿಲೆನಿಸಿ ಪ್ರಕಾಶಮಾನವಾಗಿರುತ್ತದೆಂದೂ ವಿವರಿಸಿದ್ದಾನೆ. ಈ ಪದ್ಯವೇ ನಾಂದಿಯಾಗಿ ಆ ಪರಂಜ್ಯೋತಿಯ ಸ್ಮರಣೆಯಿಂದ ಆತ ಭರತೇಶವೈಭವವೆಂಬ ಬೃಹತ್ ಕಾವ್ಯವನ್ನು ಬರೆಯುವ ಜ್ಞಾನ ಶಕ್ತಿಯನ್ನು ಪಡೆದನೆಂದ ಮೇಲೆ ಸ್ವಯಂ ಆ ಸುಜ್ಞಾನ

ಜ್ಯೋತಿಯೇ ತಾನಾದ ಆ ತೀರ್ಥೇಶನ ಸುಖಾನಂದಗಳಿಗೆ ಎಣೆಯುಂಟೇ? ಅವರ ಸುಜ್ಞಾನಸುಖ ಅತೀಂದ್ರಿಯವಾದುದು. ಸ್ವತಂತ್ರವಾದ ಆತ್ಮಾನಂದ. ಅದು ನಮ್ಮ ಮಾತು ಮತ್ತು ಮನಸ್ಸಿಗೆ ನಿಲುಕದಂತಹುದು. ಇದನ್ನೇ ಧನಂಜಯ ಕವಿಯು ತನ್ನ ನಾಮಮಾಲೆಯ ಪ್ರಾರಂಭದಲ್ಲಿ ಪರಂಜ್ಯೋತಿ ಸ್ವರೂಪನಾದ ತೀರ್ಥೇಶನ ಸ್ತುತಿ ಮಾಡಿದ್ದಾನೆ.

ತನ್ನಮಾಮಿ ಪರಂಜ್ಯೋತಿ.
ರವಾಜ್ಞಾನಸಗೋಚರಂ।
ಉನ್ಮೂಲಯತ್ಯವಿದ್ಯಾಂ-
ದ್ವಿದ್ಯಾಮುನ್ಮೀಲಯತ್ಯಪಿ॥

ಅಂದರೆ ಯಾವುದು ಸದ್ವಿದ್ಯೆ ಎಂಬ ಜ್ಞಾನವನ್ನು ಪ್ರಕಾಶ ಮಾಡುವುದೋ, ಯಾವುದು ಅವಿದ್ಯಾ, ಅಜ್ಞಾನವನ್ನು ನಾಶಮಾಡುವುದೋ ಮತ್ತು ಯಾವುದು ಮಾತು, ಮನಸ್ಸುಗಳಿಗೆ ಅಗೋಚರವೋ ಅಂತಹ ಸುಜ್ಞಾನಸ್ವರೂಪವಾದ ಪರಂಜ್ಯೋತಿಗೆ ನಮಸ್ಕರಿಸುತ್ತೇನೆ.

ಇಲ್ಲಿ ತೀರ್ಥಂಕರರು ಬೇರೆಯಲ್ಲ, ಪರಂಜ್ಯೋತಿ ಬೇರೆಯಲ್ಲ. ಶ್ರೇಷ್ಠವಾದ ಆತ್ಮಪ್ರಕಾಶವನ್ನು ಪಡೆದವರೇ ತೀರ್ಥಂಕರರು. ಆತ್ಮ ಬೇರೆಯಲ್ಲ, ಜ್ಞಾನ ಬೇರೆಯಲ್ಲ. ಶ್ರೇಷ್ಠವಾದ ಅನಂತಜ್ಞಾನಿಯೇ ತೀರ್ಥಂಕರರು.

ಅನಾದಿ ಕಾಲದಿಂದ ಈ ಜೀವನು ಜಡದ ಸಂಬಂಧದಿಂದ ಪರತಂತ್ರಿಯಾಗಿ ಜನನ-ಜರಾ-ಮರಣವೆಂಬ ತಾಪತ್ರಯಕ್ಕೆ ಸಿಲುಕಿ ಪರದಾಡುತ್ತಿದ್ದಾನೆ. ಈ ಲೋಕದಲ್ಲಿ ದೇವ, ಮನುಷ್ಯ, ತಿರ್ಯಂಚ, ನಾರಕಿಗಳೆಂಬ ಚತುರ್ಗತಿ ರೂಪವಾದ ಸಂಸಾರದಲ್ಲಿ ಸುತ್ತುತ್ತ ತನ್ನ ಮನ, ವಚನ, ಕಾಯಗಳ ಕ್ರಿಯೆಗಳಿಂದ ಕರ್ಮವನ್ನು ಬಂಧ ಮಾಡಿಕೊಳ್ಳುತ್ತ ಯಾವುದೂ ಒಂದು ನಿಲುಗಡೆಯ ಸ್ಥಾನ ಸಿಗದೆ ಪರಿತಪಿಸುತ್ತದೆ. ಜೀವನಿಗೆ ಈ ಜಡ ಕರ್ಮದ ಸಂಪರ್ಕದಿಂದಾಗಿ ಈ ಪರದಾಟವಾಗಿದೆ. ಒಂದು ಕಾಲಕ್ಕೆ ಯಾರಾದರೊಬ್ಬರ ಆಶ್ರಯ ಅಥವಾ ಬೋಧಿಲಾಭವಾಗಿ, ಜೀವ ಜಡಗಳ ಭೇದಜ್ಞಾನವುಂಟಾಗಿ, ಸರ್ವಸಂಗ ಪರಿತ್ಯಾಗಿಯಾಗಿ, ಇಂದ್ರಿಯ, ಮನಸ್ಸು ಮತ್ತು ಬಾಹ್ಯಾಭ್ಯಂತರ ಪರಿಗ್ರಹದಿಂದ ದೂರನಾಗಿ ಜ್ಞಾನ, ಧ್ಯಾನ, ತಪಸ್ಸಿನಲ್ಲಿ ನಿರತನಾದಾಗ ಜೀವನೊಂದಿಗೆ ಅಂಟಿಬಂದಿದ್ದ ಜಡದ ಆವರಣಗಳಾದ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ಅಂತರಾಯಗಳೆಂಬ ಕರ್ಮದ ಪೊರೆಯು ಜಾರಿಹೋಗಿ ಆತ್ಮನ ಸ್ವಸ್ವರೂಪವಾದ



ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತ ಸುಖಗಳು ತಾನೇ ತಾನಾಗಿ ಪ್ರಕಟವಾಗಿ ಜಗತ್ತಿನಲ್ಲಿ ಧರ್ಮವೆಂಬ ತೀರ್ಥವನ್ನು ಹರಿಸುವರು. ಆದುದರಿಂದ ಅವರನ್ನು 'ಧಮ್ಮತಿತ್ಥಯರೇ ಜಿಣವರೇ' ಎಂದಿದ್ದಾರೆ. ಕರ್ಮಶತ್ರುವನ್ನು ಗೆದ್ದುದರಿಂದ ಜಿನೇಶರೆಂದೂ. ಧರ್ಮೋಪದೇಶವನ್ನು ಮಾಡುವವರಾದುದರಿಂದ ತೀರ್ಥಂಕರರೆಂದೂ, ಎಲ್ಲ ದೋಷಗಳಿಂದ ವಿಮುಕ್ತರಾಗಿರುವುದರಿಂದ ನಿರ್ದೋಷಿಗಳೆಂದೂ, ಸಕಲವನ್ನೂ ತಿಳಿದಿರುವುದರಿಂದ ಸರ್ವಜ್ಞರೆಂದೂ, ಈ ಜ್ಞಾನವು ಶ್ರೇಷ್ಠವೂ ಪ್ರಭಾವಯುತವೂ ಆದ ಪ್ರಕಾಶವಾದುದರಿಂದ ಪರಂಜ್ಯೋತಿಯೆಂದೂ ಪ್ರಸಿದ್ಧರಾದರು.

ಸ್ವಾಮಿ ಸಮಂತಭದ್ರಾಚಾರ್ಯರು ದೇವನ ಲಕ್ಷಣವನ್ನು ಹೇಳುತ್ತ,- 'ಆಪ್ತೇನೋಚ್ಛಿನ್ನದೋಷೇಣ ಸರ್ವಜ್ಞೇನಾಗಮೇಶಿನಾ' ಎಂದಿದ್ದಾರೆ. ಅಂದರೆ ನಿರ್ದೋಷತ್ವ, ಸರ್ವಜ್ಞತ್ವ ಮತ್ತು ಆಗಮೇಶಿತ್ವ (ಉಪದೇಶ) ಈ ಮೂರೂ ಗುಣಗಳು ದೇವನಲ್ಲಿರಬೇಕು ಆತನಿಂದ ಹೇಳಲ್ಪಟ್ಟ ಧರ್ಮವು ಧರ್ಮವೂ ಪವಿತ್ರರಾಗಿ ಪಾವನವಾದ ಪದವಿಯನ್ನು ಹೊಂದಬಲ್ಲರು. ಈ ಗುಣಭೂಷಣರಾದ ತೀರ್ಥೇಶರನ್ನು ಸ್ತುತಿ ಮಾಡುತ್ತ ಇದೇ ಆಚಾರ್ಯರು 'ಪರಮೇಷ್ಠೀ ಪರಂಜ್ಯೋತಿಃ' ಎಂದು ಮುಂತಾಗಿ ಹೇಳಿದ್ದಾರೆ. ಸ್ವಾಧೀನನಾದ ಸುಖ ಸಾಮ್ರಾಜ್ಯಾಧಿಪತಿಯಾದ ಪವಿತ್ರಾತ್ಮನಿಗೆ ಪರಮೇಷ್ಠಿ ಎಂದೂ, ಆವರಣರಹಿತ ನಾದ, ನಿರಾತಂಕವಾದ ಸುಜ್ಞಾನಪ್ರಕಾಶನಿಗೆ ಪರಂಜ್ಯೋತಿ ಎಂದೂ ಸ್ತುತಿಸಿದ್ದಾರೆ.

ಇದನ್ನೇ ರತ್ನಾಕರ ಕವಿ ಭರತೇಶ ವೈಭವದಲ್ಲಿ 'ಜ್ಯೋತಿಸ್ವರೂಪನು, ಸುಜ್ಞಾನಸ್ವರೂಪನು, ವೀತರಾಗನು, ನಿರಾಮಯನು' ಎಂದೂ, 'ಸಕಲ ವಿಕಲ್ಪ ವಿವರ್ಜಿತ ವಿಶ್ವತತ್ತ್ವದೀಪಕ ದಿವ್ಯ ಸುಜ್ಞಾನರೂಪ' ಎಂದೂ, 'ಕಾಣದರ್ಥವ ಕಾಣಿಸುವ ಪರಂಜ್ಯೋತಿ' ಎಂದೂ ಭಗವಂತನನ್ನು ಕೊಂಡಾಡಿದ್ದಾನೆ.

ಇದನ್ನೇ ಧನಂಜಯ ಕವಿಯು ತನ್ನ ವಿಷಾಪ ಹಾರ ಸ್ತೋತ್ರದಲ್ಲಿ-

ತತಸ್ತ್ರಿ ಲೋಕೀನಗರಾಧಿದೇವಂ।
ನಿತ್ಯಂ ಪರಂಜ್ಯೋತಿರನಂತಶಕ್ತಿಂ॥ ಎಂದಿದ್ದಾರೆ.

ಎಂದರೆ- ತ್ರಿಲೋಕಾಧಿಪತಿಯೂ ನಿತ್ಯನೂ ಶ್ರೇಷ್ಠವಾದ ಸುಜ್ಞಾನ ಜ್ಯೋತಿ ಪ್ರಕಾಶನೂ, ಅನಂತಶಕ್ತಿಯುತನೂ ಆದ ತೀರ್ಥೇಶನಿಗೆ ನಮಸ್ಕಾರ.

ಧರ್ಮವೆಂಬುದೇ ಒಂದು ಜ್ಯೋತಿ. ಅದನ್ನು ಆಗಾಗ ಜನ್ಮ ತಾಳುವ

ತೀರ್ಥಾದೀಶರು ಆರದಂತೆ ಎಣ್ಣೆ ಬತ್ತಿಗಳನ್ನು ಹಾಕಿ ಹೋಗುತ್ತಾರೆ. ಅಂದರೆ ಅವರು ಧರ್ಮವನ್ನು ಪುನರುದ್ಧಾರ ಮಾಡಿ ಪ್ರಸಾರ ಮಾಡುತ್ತಾರೆ. ಅವರು ಬೆಳಗಿಸಿದ ಧರ್ಮಜ್ಯೋತಿ ಸದಾ ಪ್ರಕಾಶ ಮಾನವಾಗಿಯೇ ಇರುತ್ತದೆ. ಅದು ಎಂದೂ ನಂದುವುದೇ ಇಲ್ಲ. ಏಕೆಂದರೆ, ಯಾವತ್ತೂ ನಂದದಂತಹ ಸ್ವಯಂಜ್ಯೋತಿ ರೂಪರಾದ ಪರಂಜ್ಯೋತಿಗಳು ಬೆಳಗಿದ ಧರ್ಮ. ಈ ಸತ್ಯವಾದ ಮುಕ್ತಿಮಾರ್ಗ ವನ್ನು ಬೋಧಿಸಿದ್ದಾರೆ. ಆದ್ದರಿಂದ ಅವರು ಮುಕ್ತಿಮಾರ್ಗಕ್ಕೆ ಒಡೆಯರಾದರು. ಕರ್ಮ ಪರ್ವತವನ್ನು ಭೇದಿಸಿದುದರಿಂದ ಅವರು ವಿಶ್ವವನ್ನೆಲ್ಲ ಅರಿತರು. ತಾವು ಕಂಡ ಸತ್ಯವನ್ನು ವಿಶ್ವದ ಹಿತಕ್ಕಾಗಿ ಬೋಧಿಸಿದರು. ಇವರ ಬೋಧನೆಯೇ ವಿಶ್ವಧರ್ಮವೆನಿಸಿತು. ಇಂತಹ ಗುಣ ನಮ್ಮಲ್ಲೂ ಉಂಟಾಗಲೆಂದು ಬಯಸುವವರು ಆ ಪರಂಜ್ಯೋತಿಯ ಬೆಳಕನ್ನು ಆಶ್ರಯಿಸಬೇಕು. ಅದಕ್ಕಾಗಿ ಹೇಳಿದ್ದಾರೆ.-

ಮೋಕ್ಷಮಾರ್ಗಸ್ಯ ನೇತಾರಂ ಭೇತ್ತಾರಂ ಕರ್ಮಭೂಭೃತಾಮ್।
ಜ್ಞಾತಾರಂ ವಿಶ್ವತತ್ತ್ವಾನಾಂ ವಂದೇ ತದ್ಗುಣಲಬ್ಧಯೇ॥

ಇಲ್ಲಿ ಜ್ಞಾತಾರಂ ವಿಶ್ವತತ್ತ್ವಾನಾಂ ಎಂಬುದೇ ಪರಂಜ್ಯೋತಿತ್ವದ ದ್ಯೋತಕ ವಾಗಿದೆ. ಈ ವಿಶ್ವತತ್ತ್ವವನ್ನು ತಿಳಿದವನಾದುದರಿಂದ ಜೀವ ಜಡದ ಜಂಜಟವನ್ನು ಬಿಡುವ ಮಾರ್ಗೋಪಾಯವಾದ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರರೂಪೀ ರತ್ನತ್ರಯ ಮಾರ್ಗವನ್ನು ಬೋಧಿಸಿದರು.

ಇಂತಹ ಜ್ಯೋತಿಯು ಸದಾ ಪ್ರಜ್ವಲಿಸುತ್ತಿರಲೆಂದು ಆಶಿಸಿದ ಅಮೃತಚಂದ್ರಾಚಾರ್ಯರು ತಮ್ಮ ಪುರುಷಾರ್ಥಸಿದ್ಧ್ಯುಪಾಯದಲ್ಲಿ ಹೇಳಿದ್ದಾರೆ-

ತಜ್ಜಯತಿ ಪರಂಜ್ಯೋತಿಃ।
ಸಮಂ ಸಮಸ್ತೈರನಂತಪರ್ಯಾಯೈಃ।
ದರ್ಪಣತಲ ಇವ ಸಕಲಾ
ಪ್ರತಿಫಲತಿ ಪದಾರ್ಥಮಾಲಿಕಾ ಯತ್ರ।

ಅಂದರೆ, ಜಗತ್ತಿನಲ್ಲಿರುವ ಸಕಲ ಪದಾರ್ಥಗಳೂ ತಮ್ಮ ಗುಣ ಪರ್ಯಾಯ ಗಳೊಂದಿಗೆ ಏಕಕಾಲದಲ್ಲಿ ಪ್ರತಿಬಿಂಬಿತ ಸುಜ್ಞಾನದರ್ಪಣವೆನಿಸಿದ ಪರಂಜ್ಯೋತಿಯು ಸದಾ ಪ್ರಕಾಶಿಸಲಿ. ಇಲ್ಲಿ ಆಚಾರ್ಯರ ಅಭಿಪ್ರಾಯವು ಈ ಪ್ರಕಾಶವು ಸದಾ ಎಲ್ಲರಲ್ಲೂ ಎಲ್ಲ ಕಡೆಯಲ್ಲೂ ಪ್ರಕಾಶವಾಗಿರಲೆಂಬುದಾಗಿರುತ್ತದೆ.

ತಾತ್ಪರ್ಯ ಇಷ್ಟೇ ಆತ್ಮನ ನಿಜವಾದ ಗುಣ ಕೇವಲಜ್ಞಾನವಾಗಿದೆ. ಅಂದರೆ



ಕೇವಲಜ್ಞಾನವೇ ಆತ್ಮವಾಗಿದೆ. ಆದುದರಿಂದಲೇ ಆತ್ಮನ ಪ್ರಮಾಣವೇನು? ಎಂದರೆ 'ಜ್ಞಾನಪ್ರಮಾಣಂ ಆತ್ಮಾ' ಜ್ಞಾನವೆಷ್ಟಿದೆಯೋ ಆತ್ಮನ ಪ್ರಮಾಣವೂ ಅಷ್ಟೇ ಇದೆ. ಈ ಜ್ಞಾನಗುಣವನ್ನು ಸಂಪೂರ್ಣ ಪ್ರಕಟ ಮಾಡಿಕೊಂಡು ಜ್ಞಾನವೇ ತಾವಾದವರೇ ಆ ತೀರ್ಥಂಕರ ಪರಮ ಜಿನದೇವರು. ಅವರು ಜಗತ್ತಿನ ಕಲ್ಯಾಣಕ್ಕಾಗಿ ಉತ್ತಮವಾದ ಬೋಧೆಯನ್ನು ನೀಡಿದವರು. ಇಂತಹ ಎಲ್ಲ ತೀರ್ಥಂಕರರೂ ಜಗಜ್ಜ್ಯೋತಿಗಳೇ ಆಗಿದ್ದಾರೆ. ಹೀಗೆ ಪರಂಜ್ಯೋತಿ, ಪ್ರತ್ಯಗ್ಜ್ಯೋತಿ, ಜಗಜ್ಯೋತಿ, ಆತ್ಮಜ್ಯೋತಿ, ಜ್ಞಾನ ಜ್ಯೋತಿ, ಧರ್ಮಜ್ಯೋತಿ ಎಂಬವೆಲ್ಲ ಶಬ್ದಗಳೇ ಆಗಿವೆ.

ಇಂತಹ ಜ್ಯೋತಿಯು ನನ್ನಾತ್ಮನಲ್ಲೂ ಅಡಗಿದೆ. ಅದು ಕರ್ಮದ ಆವರಣದಿಂದ ಪ್ರಕಾಶವಾಗದಂತಾಗಿದೆ. ಅದನ್ನು ಪ್ರಕಟಪಡಿಸಿಕೊಳ್ಳುವುದು ನನಗೂ ಬೇಕಾಗಿದೆ. ಅದಕ್ಕಾಗಿ ಹಾಗೆ ಪ್ರಕಾಶಪಡಿಸಿಕೊಂಡ ಪರಂಜ್ಯೋತಿಯು ನಿರೂಪಿಸಿದ ಸಮ್ಯಗ್ದರ್ಶನ, ಸಮ್ಯಗ್ ಜ್ಞಾನ, ಸಮ್ಯಕ್ ಚಾರಿತ್ರವೆಂಬ ರತ್ನತ್ರಯಗಳ ಬೆಳಕಿನಲ್ಲಿ ಸಾಗುತ್ತ, ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳೆಂಬ ಪಂಚಶೀಲಗಳ ಪಾಲಕನಾಗಿ ಮುಂದುವರಿಯುತ್ತ ಭಕ್ತಿ, ಜ್ಞಾನ, ವೈರಾಗ್ಯಗಳ ಮೂಲಕ ಬಾಹ್ಯವನ್ನು ಮರೆತು ಅಂತಃಶೋಧನೆಯಲ್ಲಿ ತೊಡಗಿ ಕ್ರಮವಾಗಿ ಕರ್ಮದ ಪೊರೆಯನ್ನು ಹರಿಯುತ್ತ ಅಂತರ್ಯದಲ್ಲಿ ಅಡಗಿರುವ ಪರಂಜ್ಯೋತಿ ಯನ್ನು ಕಾಣಬಹುದು.

ಈ ರೀತಿಯ ಅರಿವು ಯಾರಿಗೆ ಮೂಡುವುದೋ ಅವರು ಈ ಸಂಸಾರದಿಂದ ಪಾರಾಗಿ ಹೋಗಿದ್ದಾರೆ. ಈ ಅರಿವು ಆಗದೇ ಅನಾದಿ ಕಾಲದಿಂದಲೂ ನಾವಿನ್ನೂ ಸಂಸಾರದಲ್ಲಿಯೇ ಅಲೆಯುತ್ತಾ ಇದ್ದೇವೆ. ಅದರಿಂದಲೇ ಆ ತೀರ್ಥಾಧೀಶರು ಅನುಭವಿಸಿ ತಿಳಿಸಿದ ನಿತ್ಯ ಸುಖ-ಶಾಂತಿಗಳು ನಮಗೆ ದೊರೆತಿಲ್ಲ. ಈ ಸಂಸಾರಸುಖವೆಲ್ಲ ಅತೃಪ್ತಿಕರವಾದುದು, ಪರಾಧೀನವಾದುದು. ಇದೂ ಅಡ್ಡಿ, ಅಡಚಣೆಯಿಂದ ಕೂಡಿದುದೂ ಆಗಿದೆ. ಇಹದಲ್ಲಿ ಎಷ್ಟೇ ಸುಖವನ್ನು ಅನುಭವಿಸಿದರೂ ಇದಕ್ಕಿಂತಲೂ ಮಿಗಿಲಾದ ಸುಖದ ಆಸೆ ಇದ್ದೇ ಇರುತ್ತದೆ. ಈ ಆಸೆಯನ್ನು ಹಿಂಗಿಸುವ ನೈಜ ಸುಖವೆಂದರೆ ಪರಂಜ್ಯೋತಿಯ ಪಾವನ ಸುಖ. ಅದು ಮತ್ತೆಲ್ಲೂ ಇಲ್ಲ. ಅದು ಸ್ವಾಧೀನವಾದುದು. ಕಸ್ತೂರಿ ಮೃಗವು ತನ್ನ ನಾಭಿಯಲ್ಲೇ ಇರುವ ಸುವಾಸಿತ ಕಸ್ತೂರಿಯನ್ನು ಅರಿಯದೆ ಅದನ್ನು ಪಡೆಯಲು ಅಹರ್ನಿಶ ಅಲೆದಾಡಿ ಕೊನೆಗೂ ಅದು ದೊರೆಯದೆ ಬಳಲಿ ಸಾಯುತ್ತದೆ.

ಜನಕ ಮಹಾರಾಜನು ಮಹಾನ್ ಆತ್ಮಜ್ಞಾನಿ ಎಂಬುದನ್ನು ಕೇಳಿದ ಓರ್ವ

ಪ್ರಯಾಣಿಕನು ರಾಜನಲ್ಲಿಗೆ ಬಂದು ನನಗೂ ಆತ್ಮ ಜ್ಞಾನವನ್ನು ತೋರಿಸಿರಿ. ಎಂದು ಕೇಳಿದನು. ಈತನಿಗೆ ಬುದ್ಧಿ ಕಲಿಸಲು ಚತುರನಾದ ಜನಕನು ಆತನನ್ನು ನದಿಯ ದಂಡೆಯಲ್ಲಿದ್ದ ತನ ಸೇವಕನಲ್ಲಿಗೆ ಕಳುಹಿಸಿದ. ಆ ಪ್ರಯಾಣಿಕನು ಆ ಸೇವಕನಲ್ಲಿಗೆ ಬಂದು, 'ನನಗೆ ಆತ್ಮ ಜ್ಞಾನವನ್ನು ಕೊಡು' ಎಂದು ಕೇಳಿದನು. ಅದಕ್ಕೆ ಆ ಸೇವಕನು ಜನಕ ರಾಜನಿಂದ ಮೊದಲೇ ಆತ್ಮ ಜ್ಞಾನದಲ್ಲಿ ತರಬೇತಾದವನು. ಅವನು 'ಅಯ್ಯಾ! ಒಂದು ಲೋಟ ನೀರನ್ನು ತಂದು ಕೊಡು. ಬಹಳ ಬಾಯಾರಿದೆ. ಕುಡಿದು ನಿನಗೆ ಆತ್ಮ ಜ್ಞಾನ ಕೊಡುತ್ತೇನೆ' ಎಂದನು. ಇದನ್ನು ಕೇಳಿ ಆ ಪ್ರಯಾಣಿಕನಿಗೆ ಆಶ್ಚರ್ಯವಾಗಿ 'ಅಯ್ಯಾ! ನೀರಿನಲ್ಲೇ ನಿಂತು ಕುಡಿಯಲಾರದೆ ನೀರನ್ನು ತಂದುಕೊಡು ಎಂದು ಕೇಳುವ ನೀನು ಹುಚ್ಚನಿರಬೇಕು' ಎಂದನು. 'ನಾನಲ್ಲ ಹುಚ್ಚ, ನೀನು. ನಿನ್ನಲ್ಲಿಯೇ ಇರುವ ಆತ್ಮನನ್ನು ಕಾಣಲಾರದೆ ಎಲ್ಲೆಲ್ಲಿಯೋ ಹುಡುಕಲು ಬಂದಿರುವವನು ನೀನಲ್ಲವೇ?' ಎಂದ. ಆಗ ಆ ಪ್ರಯಾಣಿಕನಿಗೆ ಜ್ಞಾನೋದಯವಾಗಿ ಸಮಾಧಾನದಿಂದ ಹೋದನು. ಹೀಗಾಗಿ ನಮ್ಮಲ್ಲೇ ಅಡಗಿರುವ ಪರಂಜ್ಯೋತಿಯ ಅರಿವು ನಮಗಾಗಿಲ್ಲ. ಇದನ್ನೇ ಪದ್ಮನಂದಿ ಪಂಚವಿಂಶತಿಯಲ್ಲಿ ಹೇಳಿದ್ದಾರೆ:

ಶೃತಪರಿಚಿತಾನುಭೂತಂ ಸರ್ವಂ ಸರ್ವಸ್ಯ ಜನ್ಮನೇ ಸುಚಿರಂ।
ನತು ಮುಕ್ತ್ಯೇಽತ್ರ ಸುಲಭಾ ಶುದ್ಧಾತ್ಮಜ್ಯೋತಿರುಪಲಬ್ಧಿಃ॥

ಅಂದರೆ, ಈ ಲೋಕದಲ್ಲಿ ಅನಾದಿಕಾಲದಿಂದಲೂ ಸುಖಕ್ಕೆ ಕಾರಣವಾದ ಪಂಚೇಂದ್ರಿಯಗಳ ಎಲ್ಲ ತರದ ವಿಷಯವನ್ನು ಕೇಳಿದ್ದೇವೆ. ಪರಿಚಯವೂ ಅನುಭವವೂ ಆಗಿದೆ. ಆದರೆ ಮೋಕ್ಷಕ್ಕೆ ಸಾಧನವಾದ ನಿರ್ಮಲ ಶುದ್ಧ ಚೈತನ್ಯ ಜ್ಯೋತಿಯ ಪರಿಚಯವಾಗಲಿಲ್ಲ. ಹುಡುಕಲೂ ಪ್ರಯತ್ನಿಸಲಿಲ್ಲ. ಆ ಕಡೆ ಹೊರಳಿಯೂ ನೋಡಿಲ್ಲ. ಅದರಿಂದಾಗಿ ಆಧ್ಯಾತ್ಮಾನುಭವ ರಸಾನಂದದ ಪರಿಚಯವೆಲ್ಲಿ ಆಗಬೇಕು? ಈಗಲೂ ಕಾಲ ಮಿಂಚಿಲ್ಲ. ಈ ಸಂಸಾರದಲ್ಲಿಯೂ ಈ ಜೀವಿಗೆ ಏನಾದರೂ ಸ್ವಲ್ಪ ಶಾಂತಿ, ಸಮಾಧಾನ, ನೆಮ್ಮದಿಗಳು ದೊರೆಯಬೇಕೆಂಬ ಇಚ್ಛೆ ಇದ್ದಲ್ಲಿ ಪರಂಜ್ಯೋತಿಯ ಪಾವನ ಪ್ರಕಾಶವೆಂಬ ಆಧ್ಯಾತ್ಮದಲ್ಲಿ ಪ್ರವೃತ್ತನಾಗಿ ತನ್ನಾತ್ಮಜ್ಯೋತಿಯನ್ನು ಬೆಳಗಿಸಿಕೊಂಡು ಬಾಳುತ್ತ ಮುಂದೆ ಸಾಗಿದರೆ, ಒಂದಲ್ಲ ಒಂದು ಕಾಲಕ್ಕೆ ಶಾಶ್ವತ ಸುಖ ದೊರೆತೇ ದೊರೆಯುತ್ತದೆ.



# 49. ಜೈನದರ್ಶನದ ಜೀವಾಳ ಅನೇಕಾಂತವಾದ

ಜಗತ್ತಿನಲ್ಲಿ ಜೈನ ಧರ್ಮವೇ ಶ್ರೇಷ್ಠವಾದುದು. ಇದು ಅನೇಕ ವಿಶಿಷ್ಟ ಗುಣಗಳನ್ನು ಹೊಂದಿರುವುದರಿಂದ ಶ್ರೇಷ್ಠವೆನಿಸಿದೆ.

ವತ್ಥು ಸಹಾವೋ ಧಮ್ಮೋ । ಅಣೇತಾಂತೋಣಾಮ । ಜಚ್ಚಂತ್ತರಂ ॥ ಎಂದರೆ ವಸ್ತುವಿನ ಯತಾರ್ಥ ಸ್ವರೂಪವನ್ನು ನಿರೂಪಿಸುವುದೇ ಧರ್ಮ. ಆ ವಸ್ತುವಿನಲ್ಲಿ ಅನೇಕ ಗುಣ ಧರ್ಮಗಳು ಅಡಕವಾಗಿರುತ್ತದೆ. (ಬೆಂಕಿಯಲ್ಲಿ ಉಷ್ಣತೆ. ನೀರಿನಲ್ಲಿ ಆರಿಸುವ ಗುಣ ಇದ್ದಂತೆ : ನೀರು ಕುದಿಯುವಷ್ಟು ಕಾದಿದ್ದರೂ ಅದು ಬೆಂಕಿಯನ್ನು ಆರಿಸುತ್ತದೆ)

ಈ ವಸ್ತು ಸ್ವರೂಪವನ್ನು ನ್ಯಾಯ ನಿಖರವಾಗಿ ತಿಳಿಸುವ ನಿಯಮವನ್ನು ಜಿನೇಂದ್ರ ಭಗವಾನರು ಬೋಧಿಸಿದ್ದಾರೆ. ಆ ನಿಯಮವು ಜಿನ ಶಾಸ್ತ್ರದಲ್ಲಿ ವರ್ಣಿತವಾಗಿದೆ. ಅದನ್ನು ಜಿನ ಗುರುಗಳೂ, ಕವಿ ವಿದ್ವಾಂಸರು ಕಲಿತು ವಸ್ತುವಿನ ಯತಾರ್ಥ ಸ್ವರೂಪವನ್ನು ಕಂಡುಕೊಂಡು ತನ್ಮೂಲಕ ಆಧ್ಯಾತ್ಮರಸವನ್ನು ಪಾನ ಮಾಡಿ ಅಂತರ್ಯದಲ್ಲಿ ಅಡಗಿರುವ ಚಿನ್ಮಯಾತ್ಮನನ್ನು ಕಂಡು ಸತ್ಯ ಸುಖ ಶಾಂತಿಯನ್ನು ಅನುಭವಿಸಿ ಆ ಅನುಭವದ ಸಾರವನ್ನು ಆಧ್ಯಾತ್ಮಿಗಳಿಗೆ ಉಣಬಡಿಸಿದ್ದಾರೆ. ಆ ಅನುಭವಾಮೃತ ವಾಹಿನಿಯೇ ಜೈನಧರ್ಮದ ಪ್ರಾಣವೆನಿಸಿದ ಅನೇಕಾಂತವಾದ. ಇತರರ ನಿರ್ದೋಷವಾದ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದು, ಅನ್ಯಮತ ಸಹಿಷ್ಣತೆ, ಸತ್ಯ ಅಹಿಂಸೆಗೆ ಗೌರವ ಮುಂತಾದ ಗುಣಗಳಿಂದ ಕೂಡಿರುವ ಇದು ಸತ್ಯಾರ್ಥ ಪ್ರಕಾಶನದ ದರ್ಪಣ. ಇದು ವೀತರಾಗ ವಿಜ್ಞಾನಿಯು ನಿರೂಪಿಸಿದ ನ್ಯಾಯ. Jain Law ಎನಿಸಿದೆ.

ಪ್ರತಿ ಒಂದು ವಸ್ತುವಿನಲ್ಲೂ ಅನೇಕ ಗುಣಧರ್ಮಗಳಿವೆ. ಅವುಗಳಲ್ಲಿ ಒಂದು ಗುಣ ಮುಖ್ಯವೂ ಉಳಿದವು ಗೌಣವೂ ಆಗಿದ್ದು, ಮುಖ್ಯವಾದ ಮೂಲಗುಣವನ್ನು ನಿರ್ಣಯಿಸುವ ಸಾಧನವೇ ಅನೇಕಾಂತ. ಅನೇಕಾಂತದಲ್ಲಿ ಏಕವೆಂಬುದು ಅಡಕವಾಗಿದೆ. ಪುರುಷಾರ್ಥ ಸಿದ್ಧಿ ಉಪಾಯದಲ್ಲಿ ಹೇಳಿದ್ದಾರೆ - ಏಕೇನಾಕರ್ಷಂತೀ ಶ್ಲಥಯಂತಿ ವಸ್ತುತತ್ವ ಮಿತರೇಣ । ಅಂತೇನ ಜಯತಿ ಜೈನೀನೀತಿರ್ಮಂಥಾನ ನೇತ್ರಮಿವ ಗೋಪಿ - ಅಂದರೆ ಗೋಪಿಕಾಸ್ತ್ರೀಯು ಮೊಸರನ್ನು ಕಡೆಯಲು

ಕಡಗೋಲ ಹಗ್ಗದ ತುದಿಗಳನ್ನು ಎರಡು ಕೈಲಿ ಹಿಡಿದಿದ್ದರೂ ಒಂದನ್ನು ಎಳೆದು ಇನ್ನೊಂದನ್ನು ಸಡಿಲವಾಗಿ ಹಿಡಿದಿರುತ್ತಾಳೆ. ಹೀಗೆ ಎಳೆಯುವಾಗ ಒಂದು ಮುಖ್ಯವೂ ಇನ್ನೊಂದು ಗೌಣವೂ ಆಗಿದ್ದು ಮೊಸರು ಕಡೆಯುವ ಕಾರ್ಯವಾಗಿ ಬೆಣ್ಣೆ ಬರುತ್ತದೆ. ಹಾಗೆಯೇ ಜೈನನು ಪದಾರ್ಥ ನಿರ್ಣಯ ಪದ್ಧತಿಯಾದ ಅನೇಕಾಂತದ ಮೂಲಕ ಪದಾರ್ಥದಲ್ಲಿನ ಒಂದು ಗುಣವನ್ನು ಮುಖ್ಯವನ್ನಾಗಿಯೂ ಮಿಕ್ಕವುಗಳನ್ನು ಗೌಣವಾಗಿಯೂ ಕಂಡು ವಿವಾದವನ್ನು ಬಗೆಹರಿಸುತ್ತಾನೆ. ಮಿಥ್ಯೆಯಾದುದನ್ನು ಬಿಟ್ಟು ಸತ್ಯವನ್ನು ಮಾತ್ರ ಎತ್ತಿ ಹಿಡಿಯುತ್ತಾನೆ. ಅದಕ್ಕಾಗಿಯೇ "ಜೈನಂ ವಿಸ್ಮಯಂ ನಾಸ್ತಿ" ಎಂದಿದ್ದಾರೆ. ಆಧ್ಯಾತ್ಮಿಯಾದ ಜೈನ ಈ ಅನೇಕಾಂತ ವಿದ್ಯಾಬಲದಿಂದ ಎಲ್ಲೂ ಸೋಲನ್ನು ಅನುಭವಿಸುವುದಿಲ್ಲ. ವ್ಯವಹಾರವಾಗಲೀ ನಿಶ್ಚಯವಾಗಲೀ ಎಲ್ಲಾ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸಿ ಜಯಗಳಿಸುತ್ತಾನೆ.

ಜಗತ್ತಿನಲ್ಲಿ ಜೀವ ಮತ್ತು ಜಡ ಎಂಬ ಎರಡೇ ಮುಖ್ಯ ವಸ್ತುಗಳು (ದ್ರವ್ಯ) ಇವೆ. ಇವೆರಡರ ಮಿಲನ, ಸಂಬಂಧದಿಂದಲೇ ಸಂಸಾರದಾಟಗಳು ನಡೆದಿವೆ. ಯಾವಾಗ ಜೀವವು ಜಡದ ಸಂಪರ್ಕದಿಂದ ಪ್ರತ್ಯೇಕವಾಗಿ ತನ್ನ ಸ್ವಸೂರಪದಲ್ಲಿ ನಿಲ್ಲುವುದೋ ಅದೇ ಮುಕ್ತಿ ಅಥವಾ ಬಿಡುಗಡೆ. ಈ ಜಡ, ಚೇತನಗಳ ಗುಣ ಧರ್ಮಗಳನ್ನು ತಿಳಿಸಿ ಜೀವವು ಜಡದ ಸಂಸರ್ಗದಿಂದ ಬಿಡಿಸಿಕೊಳ್ಳುವ ಮಾರ್ಗೋಪಾಯವನ್ನು ತಿಳಿಸುವ ಸಾಧನವೇ ಅನೇಕಾಂತ. ಏಕಾಂತವೆಂಬುದು ಮಿಥ್ಯೆ. ಈ ಮಿಥ್ಯೆಯಿಂದಲೇ ಜೀವನು ಜಡದಲ್ಲಿ ಸಿಲುಕಿರುವುದು. ಇದರಿಂದಲೇ ಹುಟ್ಟು-ಸಾವುಗಳಿಗೊಳಗಾಗುತ್ತಾ ಗತಿ ಚಕ್ರದಲ್ಲಿ ಸುತ್ತಿ ಸುತ್ತಿ ನಿರಂತರ ಅತೃಪ್ತ ಸುಖ, ಸಹಿಸಲಾರದ ದುಃಖದಿಂದ ಬಳಲಬೇಕಾಗಿದೆ. ಇದರಿಂದ ಪಾರಾಗಲು ಜಿನೇಂದ್ರ ಭಗವಾನರು ನಿರೂಪಿಸಿರುವ ಅನೇಕಾಂತವಾದದ ಆಶ್ರಯ ಬೇಕು, ಅನೇಕಾಂತವೇ ಸತ್ಯ. ಇದು ಅನ್ಯಾಯಕ್ಕೆ ಒಳಗಾಗಿ ದುಃಖಿಸುವ ಆತ್ಮನಿಗೆ ಸತ್ಯವಾದ ನ್ಯಾಯವನ್ನು ಒದಗಿಸಿ ನಿರಂತರ ಸುಖ ಶಾಂತಿಯಲ್ಲಿ ನೆಲೆಯಾಗಿರುವಂತೆ ಮಾಡುತ್ತದೆ.

ಪ್ರತಿ ವಸ್ತುವಿನಲ್ಲೂ ಒಂದೇ ಸಮಯದಲ್ಲಿ ಅನೇಕ ರೀತಿಯ ಕ್ರಮವರ್ತಿಯೂ, ಅಕ್ರಮವರ್ತಿಯೂ ಆದ ಗುಣಪರ್ಯಾಯಗಳನ್ನು ಕಾಣಬಹುದು. ಒಂದು ವಸ್ತುವು ಒಂದು ದೃಷ್ಟಿಯಿಂದ ನಿತ್ಯವೂ ಇನ್ನೊಂದು ದೃಷ್ಟಿಯಿಂದ ಅನಿತ್ಯವೂ ಆಗಿರುತ್ತದೆ. ಹೇಗೆಂದರೆ ಚಿನ್ನದ ಉಂಗುರ ಸ್ವದ್ರವ್ಯ, ಸ್ವಕ್ಷೇತ್ರ, ಸ್ವಕಾಲ, ಸ್ವಭಾವವೆಂಬ ಸ್ವಚತುಷ್ಟಯದ ದೃಷ್ಟಿಯಿಂದ ಸತ್ ಆಗಿದೆ. ಅದು ಉಂಗುರವೇ ನಿಜ. ಅದೇ ಸ್ವಲ್ಪಕಾಲಾನಂತರ ಕರಗಿಸಿ ಓಲೆಯನ್ನು



ಮಾಡಿಸಲಾಯಿತು. ಈ ದೃಷ್ಟಿಯಿಂದ ಈಗ ಉಂಗುರವು ಪರದ್ರವ್ಯ, ಪರಕ್ಷೇತ್ರ, ಪರಕಾಲ ಪರಭಾವವೆಂಬ ಪರ ಚತುಷ್ಟಯದಿಂದ ಅಸತ್ ಆಯಿತು. ಈಗ ಅದು ಓಲೆಯೇ ನಿಜ. ಉಂಗುರ ಅಲ್ಲ. ಈ ಉಂಗುರ, ಓಲೆಗಳು ಆ ಚಿನ್ನದ ಪರ್ಯಾಯಗಳು ಅಷ್ಟೆ. ಇವು ಗೌಣವಾಗಿ ಚಿನ್ನವೇ ಮುಖ್ಯ. ಹೀಗೆ ಪ್ರತಿವಸ್ತುವಿನಲ್ಲೂ ಗುಣ ಪರ್ಯಾಯವಾಗುತ್ತಿರುವುದರಿಂದಲೇ 'ಗುಣ ಪರ್ಯಾಯತ್ ದ್ರವ್ಯಂ' ಎಂದರು. ಆದರೂ ಈ ದ್ರವ್ಯದ ಲಕ್ಷಣ ಸತ್ ಆಗಿದೆ. ಚಿನ್ನವಿದ್ದಂತೆ. ಉಂಗುರ ಹೋಗಿ ಓಲೆಯಾದರೂ, ಮತ್ತಿನ್ನೊಂದು ಒಡವೆಯಾದರೂ ಚಿನ್ನವಿದ್ದೇ ಇರುತ್ತದೆ. ಅದೇ ಸತ್. ಹೀಗೆ ವಸ್ತುವು ದ್ರವ್ಯದ ದೃಷ್ಟಿಯಿಂದ ನಿತ್ಯವೂ ಪರ್ಯಾಯದ ದೃಷ್ಟಿಯಿಂದ ಅನಿತ್ಯವೂ ಆಗಿದೆ. ವಸ್ತುವಿನಲ್ಲಿ ಅನಂತ ಗುಣಧರ್ಮ ು ಇರುತ್ತವೆ. ಇವುಗಳೆಲ್ಲಾ ಒಂದೊಂದು ದೃಷ್ಟಿ ಕೋನದಿಂದ ನೋಡಿದರೆ ನಿಜವೆನಿಸಿದರೂ ಕೊನೆಯಲ್ಲಿ ಅವೆಲ್ಲಾ ಮೂಲವಸ್ತುವಿನ ಅಂಗ, ಅಂಶ, ಭಾಗ ಮಾತ್ರವೆಂದು ಗೊತ್ತಾಗುತ್ತದೆ. ಆ ಅಂಗ, ಭಾಗ, ಅಂಶಗಳು ಮಾತ್ರವೇ ಕೇವಲ ವಸ್ತು ಸ್ವರೂಪವೆಂದು ನಿರ್ಣಯಿಸಲಾಗದು. ಹಾಗೆ ಮಾಡಿದರೆ ಏಕಾಂತವಾಗುತ್ತದೆ. ಅನೇಕಾಂತವಾದವು ಅವುಗಳನ್ನು ಗೌಣಮಾಡಿ ಮುಖ್ಯವೂ ಮೂಲವೂ ಆದ ವಸ್ತುಸ್ವರೂಪವನ್ನು ಪರಿಚಯ ಮಾಡಿಕೊಡುತ್ತದೆ.

ಉದಾಹರಣೆಗೆ, ಆರು ಜನ ಕುರುಡರು ಒಂದು ಆನೆಯ ವಿವಿಧ ಭಾಗಗಳನ್ನು ಮುಟ್ಟಿ ಆನೆಯು ಹೀಗಿದೆ, ಹಾಗಿದೆ ಎಂದು ವಾದಿಸುತ್ತಿದ್ದರು. ಒಬ್ಬನು ಆನೆಯು ಕಂಬವಿದ್ದಂತೆ ಇದೆ, ಇನ್ನೊಬ್ಬನು ಆನೆಯು ಗೋಡೆ ಇದ್ದಂತೆ ಇದೆ, ಹೀಗೆಯೇ ಆನೆಯು ಭರ್ಜಿ ಇದ್ದಂತೆ ಇದೆ, ಮೊರ ಇದ್ದಂತೆ ಇದೆ, ಹೆಬ್ಬಾವು ಇದ್ದಂತೆ ಇದೆ, ಪೊರಕೆ ಇದ್ದಂತೆ ಇದೆ, ಎಂದು ತಮ್ಮ ತಮ್ಮ ಮಾತನ್ನೇ ನಿಜವೆಂದೂ ವಾದಿಸುತ್ತಿದ್ದರು. ಅಲ್ಲಿಗೆ ಒಬ್ಬ ಕಣ್ಣಿದ್ದ ವ್ಯಕ್ತಿಯು ಬಂದನು. ಅವನು ಆ ಕುರುಡರ ಜಗಳವನ್ನು ಸಮಾಧಾನ ಮಾಡುತ್ತಾ ಅವರ ಮಾತಿನ ಮರ್ಮವನ್ನು ತಿಳಿದು 'ಅಯ್ಯಾ ನೀವು ಮುಟ್ಟಿ ನೋಡಿರುವುದು ಆನೆಯ ಒಂದೊಂದು ಅಂಗವನ್ನು ಮಾತ್ರ. ಕಾಲನ್ನು ಮುಟ್ಟಿ ಕಂಬದಂತೆ ಇದೆ ಎಂದೂ. ಹೊಟ್ಟೆಯನ್ನು ಮುಟ್ಟಿ ಗೋಡೆಯಂತೆ ಇದೆ ಎಂದೂ, ದಂತವನ್ನು ಮುಟ್ಟಿ ಭರ್ಜಿಯಂತೆ ಇದೆ ಎಂದೂ, ಕಿವಿಯನ್ನು ಮುಟ್ಟಿ ಮೊರದಂತೆ ಇದೆ ಎಂದೂ, ಸೊಂಡಿಲನ್ನು ಮುಟ್ಟಿ ಹೆಬ್ಬಾವಂತೆ ಇದೆ ಎಂದೂ, ಬಾಲವನ್ನು ಮುಟ್ಟಿ ಪೊರಕೆಯಂತೆ ಇದೆ ಎಂದು ತಿಳಿದಿದ್ದೀರಿ. ಇದು ವ್ಯರ್ಥ ವಾದ. ನೀವು ಪ್ರತಿಯೋರ್ವರೂ ಹೇಳುವುದು ಒಂದು ದೃಷ್ಟಿಯಿಂದ

ನಿಜ. ಕಾಲು ಕಂಬದಂತಿರುವುದು ನಿಜವಾದರೂ ಆನೆ ಕಂಬದಂತಿಲ್ಲ. ಕಾಲೇ ಆನೆಯಲ್ಲ. ಹಾಗೂ ಕಾಲು ಬಿಟ್ಟು ಆನೆ ಇಲ್ಲ. ಹೀಗೆ ಪ್ರತಿಯೋರ್ವರೂ ವಿಸ್ಮಯಕ್ಕೆ ಒಳಗಾಗಿ ಏಕಾಂತವನ್ನು ಹಿಡಿದಿದ್ದೀರಿ. ನೀವು ಮುಟ್ಟಿರುವ ಎಲ್ಲಾ ಭಾಗ, ಅಂಗಗಳೂ ಸೇರಿದರೇ ಆನೆಯಾಗುವುದು.' ಎಂದು ಅನೇಕಾಂತವಾದದಿಂದ ಅವರನ್ನು ಸಮಾಧಾನಪಡಿಸಿದನು. ಹೀಗೆ ವಾದವಿವಾದಗಳನ್ನೂ ಏಕಾಂತಪಟ್ಟನ್ನೂ ಅನೇಕಾಂತ ನ್ಯಾಯ ಸೂತ್ರದಿಂದ ಬಗೆಹರಿಸಬಹುದು.

ಈ ಅನೇಕಾಂತಕ್ಕೆ ಸ್ಯಾದ್ವಾದ, ಕಥಂಚಿತ್‌ವಾದ ಅಪೇಕ್ಷಾವಾದ, ಸಪ್ತಭಂಗೀನ್ಯಾಯ, ಎಂಬ ಪರ್ಯಾಯವಾಚೀ ನಾಮಗಳುಂಟು. ಈ ವಾದಕ್ಕೆ ಪ್ರಮಾಣನಯಗಳು ಆಧಾರವಾಗಿರುತ್ತವೆ.

ಸ್ಯಾದ್ವಾದವು ಸ್ಯಾತ್+ವಾದದಿಂದ ಕೂಡಿದೆ.

'ಸ್ಯಾತ್' ಒಂದು ಅಪೇಕ್ಷೆಯಿಂದ ಅಹುದು, ಅಲ್ಲ ಎಂಬ ಸೂತ್ರಗಳನ್ನು ಏಳು ದೃಷ್ಟಿ ಅಥವಾ ಭಂಗ, ಅಥವಾ ಅಪೇಕ್ಷೆಗಳಿಂದ ನಿರ್ಣಯಿಸಬಹುದು. ಅದಕ್ಕೇ ಸ್ಯಾದ್ವಾದವು ಸಪ್ತಭಂಗಿ ನ್ಯಾಯವೆನಿಸಿದೆ.

ಭಾರತವು ಸ್ವದೇಶವೂ ಅಹುದು, ವಿದೇಶವೂ ಅಹುದು, ನಮ್ಮ ಅಪೇಕ್ಷೆಯಿಂದ ಸ್ವದೇಶವೂ ಪರದೇಶದವರ ದೃಷ್ಟಿಯಿಂದ ವಿದೇಶವೂ ಆಗಿದೆ.

ಹೀಗೆಯೇ ಒಂದು ಮಾವಿನಹಣ್ಣು ಚಿಕ್ಕದೂ ಹೌದು ದೊಡ್ಡದೂ ಹೌದು. ಹೇಗೆಂದರೆ ನಿಂಬೇಹಣ್ಣಿಗಿಂತ ದೊಡ್ಡದೂ, ಹಲಸಿನ ಹಣ್ಣಿಗಿಂತ ಚಿಕ್ಕದೂ ಆಗಿದೆ.

ಆದರೆ ಭಾರತವಾಗಲೀ. ಮಾವಿನ ಹಣ್ಣಾಗಲೀ ತನ್ನ ಸ್ವರೂಪದಲ್ಲಿಯೇ ಇರುತ್ತವೆ. ನೋಡುವ, ಹೇಳುವವರ ದೃಷ್ಟಿ, ಅಪೇಕ್ಷೆಯಿಂದ ಸ್ವದೇಶ, ವಿದೇಶ, ಚಿಕ್ಕದು, ದೊಡ್ಡದೂ ಎನಿಸಿದೆ.

ಹೀಗೆಯೇ ಆತ್ಮನು ನಿತ್ಯನೂ ಅಹುದು, ಅನಿತ್ಯನೂ ಅಹುದು, ಗತಿಗಳಲ್ಲಿ ಸುತ್ತುತ್ತಾ ಇರುವುದರಿಂದ ಆ ಗತಿಗಳ ದೃಷ್ಟಿಯಿಂದ ಅನಿತ್ಯನೂ, ಮುಕ್ತನಾಗಿ ಒಂದು ಕಾಲಕ್ಕೆ ಸಿದ್ಧನೆನಿಸಿ ಶಾಶ್ವತ ಸ್ಥಾನದಲ್ಲಿ ಸ್ಥಿರವಾಗಿರುವನಾದ್ದರಿಂದ ನಿತ್ಯವೂ ಹೌದೂ. ಈ ನಿತ್ಯ ಅನಿತ್ಯತೆಗಳ ಸತ್ ಮಾತ್ರ ಸ್ಥಿರವಾದುದು. ಇದು ತನ್ನ ಮೂಲ ಗುಣದಲ್ಲಿ ಬದಲಾಗಲಿಲ್ಲ. ಇದೇ ಸ್ಯಾದ್ವಾದ. ಭರತ ಚಕ್ರಿಯು ಒಂದಪೇಕ್ಷೆಯಿಂದ ಮಗನೂ, ತಂದೆಯೂ, ಪತಿಯೂ, ಅಣ್ಣನೂ, ಮಾವನೂ, ಪ್ರಭುವೂ ಆಗಿದ್ದಾನೆ. ವೃಷಭನಾಥರಿಗೆ ಮಗನಾಗಿ ಅರ್ಕಕೀರ್ತಿಗೆ ತಂದೆಯಾಗಿ, ಸುಭದ್ರೆಗೆ ಪತಿಯಾಗಿ



ಬಾಹುಬಲಿಗೆ ಅಣ್ಣನಾಗಿ, ಸೇವಕನಿಗೆ ಪ್ರಭುವಾಗಿ ಇದ್ದಾನೆ. ಒಬ್ಬನೇ ವ್ಯಕ್ತಿ ಒಂದೊಂದು ಅಪೇಕ್ಷೆಯಿಂದ ವಿವಿಧ ರೂಪಸೂಚಕ ನಾಮಗಳನ್ನು ಹೊಂದಿದ್ದಾನೆ. ಹೀಗೆಯೇ ಪ್ರತ್ಯೇಕ ವ್ಯಕ್ತಿಯೂ. ಅನೇಕ ಸಂಬಂಧಗಳ ಸಮೂಹವಾಗಿದ್ದಾನೆ. ಅಂದ ಮಾತ್ರಕ್ಕೆ ಒಬ್ಬನೇ ಅಷ್ಟೊಂದು ವ್ಯಕ್ತಿಗಳಾಗಲಾರ.

ಈ ದೃಷ್ಟಿಕೋನಗಳನ್ನೇ ಸ್ಯಾದ್ವಾದವು ಸಪ್ತ (ಏಳು) ವಿಧವಾಗಿ ನಿರೂಪಿಸಿದೆ.

1. ಸ್ಯಾದಸ್ತಿ-ಒಂದು ಅಪೇಕ್ಷೆಯಿಂದ ವಸ್ತು ಇದೆ.
2. ಸ್ಯಾನ್ನಾಸ್ತಿ-ಇನ್ನೊಂದು ಅಪೇಕ್ಷೆಯಿಂದ ಆ ವಸ್ತು ಇಲ್ಲ. (ಗೌಣವಾಗಿದೆ).
3. ಸ್ಯಾದಸ್ತಿನಾಸ್ತಿ-ಒಂದು ವಸ್ತುವು ಕ್ರಮವಾಗಿ ಇದೆ ಮತ್ತು ಇಲ್ಲ.
4. ಸ್ಯಾದವಕ್ತವ್ಯಂ-ಒಂದು ವಸ್ತುವಿನಲ್ಲಿ ಅನೇಕ ಗುಣ ಧರ್ಮಗಳಿದ್ದರೂ ಏಕಕಾಲದಲ್ಲಿ ಹೇಳಲು ಬರುವುದಿಲ್ಲ.
5. ಸ್ಯಾದಸ್ತಿ ಅವಕ್ತವ್ಯ-ಒಂದು ವಸ್ತು ಇದ್ದರೂ ಹೇಳಲು ಬರುವುದಿಲ್ಲ. (ಅವ್ಯಕ್ತ)
6. ಸ್ಯಾನ್ನಾಸ್ತಿ ಅವಕ್ತವ್ಯಂ-ಆ ವಸ್ತುವು ಒಂದು ಕಾಲದಲ್ಲಿರುವುದಿಲ್ಲ ಮತ್ತು ಹೇಳಲೂ ಬರುವುದಿಲ್ಲ.
7. ಸ್ಯಾಸ್ತಿನಾಸ್ತಿ ಅವಕ್ತವ್ಯಂ-ವಸ್ತುವು ಸ್ವಸ್ವರೂಪಾದಿಗಳಿಂದ ಇರುತ್ತದೆ. ಪರಸ್ಪರೂಪಾದಿಗಳಿಂದ ಇರುವುದಿಲ್ಲ ಮತ್ತು ಹೇಳಲೂ ಬರುವುದಿಲ್ಲ.

ಹೀಗೆ ವಸ್ತು ವಿಮರ್ಶೆಗೆ ಏಳು ಭಂಗಗಳಲ್ಲಿ ಅಸ್ತಿ, ನಾಸ್ತಿ, ಅವಕ್ತವ್ಯ ಎಂಬಿವು ಮೂರು ಮೂಲಭಂಗಗಳು. ಉಳಿದವು ಸಂಯುಕ್ತ ಭಂಗಗಳು.

ಹೀಗೆ ಸತ್ ಎಂಬ ವಸ್ತು ಲಕ್ಷಣವು ಉತ್ಪಾದ ವ್ಯಯ, ಧ್ರೌವ್ಯ (ಸ್ಥಿರ) ಎಂಬ ಮೂರು ರೂಪವಾಗಿದೆ. ಅದಕ್ಕೆ ಪರ್ಯಾಯ ಅಥವಾ ಅವಸ್ಥಾರೂಪದಿಂದ ವಸ್ತುಗಳು ಉತ್ಪತ್ತಿ-ವ್ಯಯಗಳಾಗಿತ್ತಿದ್ದರೂ ದ್ರವ್ಯರೂಪದಿಂದ ಧ್ರೌವ್ಯ (ಸ್ಥಿರ) ವಾಗಿಯೇ ಇರುತ್ತದೆ. ಸೂತ್ರಕಾರರು 'ಉತ್ಪಾದವ್ಯಯಧ್ರೌವ್ಯ ಯುಕ್ತಂಸತ್-ಸತ್ ದ್ರವ್ಯ ಲಕ್ಷ್ಮಣಂ' ಎಂದರು.

ಜೀವನಲ್ಲಿ ಜ್ಞಾನ, ದರ್ಶನ, ಸುಖ, ಶಕ್ತಿ, ಕರ್ತೃತ್ವ ಭೋಕ್ತೃತ್ವ, ಪ್ರದೇಶತ್ವ, ಜೀವತ್ವ ಮೊದಲಾದ ಸಹಗಾಮೀ ಧರ್ಮಗಳೂ, ಹರ್ಷ, ವಿಷಾದ, ಸುಖ, ದುಃಖ ನರನಾರಕ, ತಿರ್ಯಕ್, ದೇವ ಮೊದಲಾದ ಕರ್ಮಗಾಮೀ ಧರ್ಮಗಳೂ ಇವೆ.

ಮತ್ತು ಅಸ್ತಿತ್ವ, ನಾಸ್ತಿತ್ವ, ವಸ್ತುತ್ವ ಮೊದಲಾದ ಗುಣಗಳೂ ಅಜೀವ ದ್ರವ್ಯದಲ್ಲೂ ಇವೆ. ಆದುದರಿಂದ ಜೀವ ಅಜೀವ ವಸ್ತುಗಳೆಲ್ಲವೂ ಅನಂತ ಧರ್ಮ ಗುಣ ಸ್ವರೂಪಗಳಾಗಿವೆ ಎಂಬುದನ್ನು ಈ ಅನೇಕಾಂತವಾದವು ನಿರೂಪಿಸುತ್ತದೆ.

ಇಂತೀ ರೀತಿಯಲ್ಲಿ ಸ್ವಚತುಷ್ಟಯ ಪರ ಚತುಷ್ಟಯ ಪ್ರಮಾಣ. ನಯ, ಸಪ್ತಭಂಗ ರೂಪವಾದ ಜೈನ ನ್ಯಾಯವು ಸ್ಯಾದ್ವಾದರೂಪದಿಂದ ಅನೇಕಾಂತದ ಮೂಲಕ ಸಕಲ ವಸ್ತುಗಳ ವಿಷಯ ವಿಮರ್ಶೆಮಾಡಿ ಮೂಲ ರೂಪದ ಸತ್ಯವನ್ನು ಎತ್ತಿಹಿಡಿಯಲು ಅನುಕೂಲವಾಗುವುದು.

ಸರ್ವೋದಯ ಧರ್ಮವನ್ನು ನಿರೂಪಿಸಿದ ಸ್ವಾಮಿ ಸಮಂತ ಭದ್ರರೂ, ಅಕಲಂಕಾಚಾರ್ಯರೇ ಮೊದಲಾದ ಮಹಾನ್ ಆಚಾರ್ಯರು ಈ ಅನೇಕಾಂತವಾದದ ಮೂಲಕ ಏಕಾಂತವಾದಿಗಳನ್ನು ಗೆದ್ದು ಜೈನ ಧರ್ಮ ಧ್ವಜವು ದಿಗಂತದಲ್ಲಿ ಶಾಶ್ವತವಾಗಿ ಹಾರಾಡುವಂತೆ ಮಾಡಿದರು.

ಈ ಅನೇಕಾಂತವಾದದ ಮೂಲಕ ಜಗತ್ತಿನ ಅನೇಕ ಸಮಸ್ಯೆಗಳನ್ನೂ ಧಾರ್ಮಿಕ, ಭೌತಿಕ ತೊಡಕುಗಳನ್ನು ಸುಲಭವಾಗಿ ಪರಿಹರಿಸಬಹುದು.

ಅನೇಕಾಂತವು ಜ್ಞಾನವಾಹಿನಿ, ಸ್ಯಾದ್ವಾದವು ಕ್ರಿಯಾವಾಹಿನಿ, ನಯ ಪ್ರಮಾಯಗಳು ದರ್ಶನ ವಾಹಿನಿಗಳಾಗಿವೆ, ಇವುಗಳ ಆರಾಧನೆಯೇ ಮೋಕ್ಷ ಮಾರ್ಗ. ಹೀಗಾಗಿ ಅನೇಕಾಂತವಾದವು ಜೈನಧರ್ಮದ ಜೀವಾಳವಾಗಿದೆ. ತರ್ಕಬದ್ಧವಾದ ನ್ಯಾಯ ನಿರ್ಣದ ಸಿದ್ಧಾಂತವಾಗಿದೆ.

## 50. ಶ್ರುತಪಂಚಮಿ

ಜ್ಯೇಷ್ಠ ಶುದ್ಧ ಪಂಚಮಿಯು ಜೈನರಿಗೊಂದು ಪರಂಪರೆಯ ಬೋಧೆಯನ್ನುಂಟುಮಾಡಿ ಜೈನರಾದವರು ತಮ್ಮ ಕಲ್ಯಾಣಕ್ಕಾಗಿ ಏನು ಮಾಡಬೇಕೆಂಬ ನೆನಪನ್ನು ತರುವ ಪರಮ ಪಾವನ ಪರ್ವವಾಗಿದೆ. ಪ್ರತಿ ವರ್ಷದಲ್ಲಿ ಒಂದು ಸಾರಿ ಈ ತಿಥಿಯು ಬರುತ್ತದೆ. ಆದರೆ ಅದರಿಂದ ನಾವು ನಮ್ಮ ನಡೆ-ನುಡಿಗಳನ್ನು ಸಾರಿ ಪಡಿಸಿಕೊಳ್ಳುವ ಪ್ರಯತ್ನವನ್ನು ಮಾತ್ರ ಮಾಡಲಿಲ್ಲ. ನಾವು



ಲೌಕಿಕ ಜ್ಞಾನವನ್ನು ಬೇಕಾದಷ್ಟು ಪಡೆದರೂ ಆದರಿಂದ ಕದಾಚಿತ್ ಅರ್ಥಸಂಪಾದನೆ ಮಾಡಿ ಜೀವನವನ್ನು ಸಾಗಿಸಬಸುದು. ಆದರೆ ಕೇವಲ ಲೌಕಿಕ ಜ್ಞಾನದಿಂದ ಜೀವದ ಉದ್ಧಾರವಾಗಲಾರದು. ಜೀವದ ಉದ್ಧಾರವಾಗಬೇಕಾದರೆ ಜಿನವಾಣಿ ಜೈನಾಗಮಗಳ ಅಧ್ಯಯನ ಮನನ ಚಿಂತನೆಗಳು ಸಾಗಬೇಕಾದುದು ಅವಶ್ಯ. ಜಿನವಾಣಿಯ ರಹಸ್ಯಗಳನ್ನು ತಿಳಿಯದ ಹೊರತು ಯಥಾರ್ಥ ವಸ್ತು ಸ್ವರೂಪದ ಬೋಧೆಯಾಗುವುದಿಲ್ಲ. ಹಿತಾಹಿತ ವಿವೇಕವಿಲ್ಲದಿದ್ದರೆ ನಮ್ಮ ನಡೆ-ನುಡಿಗಳಲ್ಲಿ ಸುಧಾರಣೆಯಾಗಲಾರದು.

ಈ ಅವಸರ್ಪಿಣಿ ಕಾಲದಲ್ಲಿ ಹೆಸರಿಗೆ ತಕ್ಕಂತೆ ಆತ್ಮನ ಜ್ಞಾನಾದಿ ಗುಣಗಳೂ ಮತ್ತು ಶರೀರಾದಿ ಪ್ರಮಾಣಗಳೂ ಕಡಿಮೆಯಾಗುತ್ತಾ ಹೋಗಹತ್ತಿವೆ. ಅನಾದಿ ಕಾಲದಿಂದ ಬಂದ ಜಿನವಾಣಿಯನ್ನು ನಮ್ಮ ಪೂರ್ವಾಚಾರ್ಯರು ಕೆಲವು ಅಂಶದಲ್ಲಿ ರಕ್ಷಣೆ ಮಾಡುತ್ತ ಇಲ್ಲಿಯವರೆಗೆ ಬಂದಿದ್ದಾರೆ. ಆ ಮಹಾತ್ಮರು ಜಿನವಾಣಿಯನ್ನು ರಕ್ಷಣೆ ಮಾಡದೆ ಇರುತ್ತಿದ್ದರೆ, ಇಂದಿನ ಜೈನರು ಜೈನರೆಂದು ಹೇಳಿಸಿ ಕೊಳ್ಳುತ್ತಿರಲಿಲ್ಲ. ನಾವು ಅಲ್ಪಸಂಖ್ಯಾತ ರಾಗಿದ್ದರೂ ಇಂದು ಜೈನರೆಂದು ಹೇಳಿಸಿ ಕೊಳ್ಳುವುದು ನಮ್ಮ ಸೌಭಾಗ್ಯವೆಂದೇ ತಿಳಿಯಬೇಕು.

ಶ್ರೀ ವರ್ಧಮಾನ ತೀರ್ಥಂಕರರು ಮೋಕ್ಷವನ್ನು ಪಡೆದ ನಂತರ ಶ್ರುತಕೇವಲಿಗಳ ವರೆಗೆ ದ್ವಾದಶಾಂಗ ಜಿನವಾಣಿಯು ಅಖಂಡ ಪ್ರವಾಹವಾಗಿ ಬಂದಿತ್ತು-ಆದರೆ ಮುಂದಿನ ಕಾಲದಲ್ಲಿ ಕೇವಲಿಗಳ ಅಭಾವವಾದದ್ದರಿಂದ ಅಂಗಜ್ಞಾನವು ಕಡಿಮೆಯಾಗುತ್ತ ಹೋಯಿತು. ಇದು ಶ್ರುತಕೇವಲಿಗಳವರೆಗೆ ಅಂದರೆ ಮಹಾವೀರರು ನಿರ್ವಾಣ ಹೊಂದಿದ ಮೇಲೆ 162 ವರ್ಷಗಳ ಪರ್ಯಂತರವಾಗಿ ದ್ವಾದಶಾಂಗ ಜ್ಞಾನವು ಅವಿಚ್ಛಿನ್ನರೂಪವಾಗಿ ಸಾಗಿ ಬಂದಿತ್ತು.

ಶ್ರುತಕೇವಲಿಗಳ ನಂತರ 11 ದಶಪೂರ್ವಧಾರಿಗಳಾದರು. ಇವರ ಕಾಲವು ಒಟ್ಟು 181 ಪ್ರಮಾಣವಾಗಿದೆ.

ತದನಂತರ ನಕ್ಷತ್ರ, ಜಯಪಾಲ ಮೊದಲಾಗಿ ಐದು ಜನ ಆಚಾರ್ಯರು ಹನ್ನೊಂದು ಅಂಗಧಾರಿಗಳಾದರು. ಅವರ ಕಾಲಗಣನೆ ಒಟ್ಟು 123 ವರ್ಷಗಳು.

ತದನಂತರ ಸುಭದ್ರ, ಯಶೋಭದ್ರ, ಭದ್ರಬಾಹು, ಲೋಹಾಚಾರ್ಯರಾದರು. ಇವರು ಹತ್ತು, ಒಂಭತ್ತು ಮತ್ತು ಎಂಟು ಅಂಗಧಾರಿಗಳಾದರು. ಒಟ್ಟು ಇವರ ಕಾಲ ಪ್ರಮಾಣ 99 ಅಥವಾ 97 ವರ್ಷಗಳೆಂದು ಹೇಳಲ್ಪಟ್ಟಿದೆ.

ಆನಂತರ ಅರ್ಹದ್ಬಲಿ, ಮಾಘನಂದಿ, ಧರಸೇನ, ಪುಷ್ಪದಂತ, ಭೂತಬಲಿ ಆಚಾರ್ಯರಾದರು. ಇವರು ಏಕಾಂಗಧಾರಿಗಳಾಗಿದ್ದರು, ಇವರ ಕಾಲಪ್ರಮಾಣ 118 ವರ್ಷಗಳು. ಶ್ರೀ ವೀರ ಭಗವಂತನ ನಿರ್ಮಾಣದಿಂದ ಭೂತಬಲಿ ಆಚಾರ್ಯರವರೆಗೆ ಒಟ್ಟು 683 ವರ್ಷಗಳು ಗತಿಸಿದುವು. ಇಲ್ಲಿಯವರೆಗೆ ಶ್ರುತಜ್ಞಾನವನ್ನು ಗುರುಪರಂಪರೆಯಿಂದ ಉಪದೇಶ ಕೇಳಿ ಹೃದಯದಲ್ಲಿ ಧಾರಣೆ ಮಾಡುತ್ತಿದ್ದರು. ಮುಂದೆ ಮಾತ್ರ ಶಿಷ್ಯರಲ್ಲಿ ಜ್ಞಾನಾ ವರಣೀಯ ಕರ್ಮದ ವಿಶಿಷ್ಟ ಕ್ಷಯೋಪಶಮವು ಕಡಿಮೆಯಾದದ್ದರಿಂದ ಧಾರಣಾಶಕ್ತಿಯು ದಿನೇ ದಿನೇ ಕಡಿಮೆಯಾಗಹತ್ತಿತು.

ಮುಂದೆ ಧರಸೇನಾಚಾರ್ಯರು ಯೋಗ್ಯ ಶಿಷ್ಯರಾದ ಭೂತಬಲಿ, ಪುಷ್ಪದಂತ ಮುನಿರಾಜರಿಗೆ ತಮ್ಮಲ್ಲಿ ಇದ್ದ ಜ್ಞಾನವನ್ನು ಕಲಿಸಿದರು. ಮುಂದೆ ಅವರೂ ಕೂಡ ಶಿಷ್ಯರಲ್ಲಿಯ ಸ್ಮರಣಶಕ್ತಿಯು ಹೀನವಾಗುತ್ತಿರುವುದನ್ನು ನೋಡಿ ಷಟ್ಖಂಡಾಗಮವನ್ನು ಲಿಪಿಬದ್ಧ ಮಾಡಿದರು. ತದನಂತರ ಚಾತುರ್ವರ್ಣ್ಯ ಸಂಘಸಮೇತರಾಗಿ ಸಿದ್ಧಾಂತಶಾಸ್ತ್ರವನ್ನು ಬಹು ಭಕ್ತಿಯಿಂದ ಜ್ಯೇಷ್ಠ ಶುದ್ಧ ಪಂಚಮಿಯ ದಿನ ಪೂಜಿಸಿದರು.

ಈ ದಿನ ಪ್ರತಿಯೊಂದು ಊರಲ್ಲಿಯೂ ಜೈನಾಗಮಗಳನ್ನೆಲ್ಲ ಸ್ವಚ್ಛವಾಗಿಟ್ಟು, ಅವುಗಳಿಗೆ ವಸ್ತ್ರಗಳನ್ನು ಸುತ್ತಿ ಸಂರಕ್ಷಿಸಬೇಕು. ಮೂಲೆಗಳಲ್ಲಿ ಬಿದ್ದ ಧರ್ಮಶಾಸ್ತ್ರಗಳನ್ನು ಈ ಪ್ರಕಾರವಾಗಿ ಸಂರಕ್ಷಣೆ ಮಾಡಿ. ಅವುಗಳನ್ನು ಭಕ್ತಿಯಿಂದ ಚತುಃಸಂಘ ಸಮೇತರಾರಗಿ ಪೂಜಿಸಬೇಕು. ಮತ್ತು ಯಥಾಶಕ್ತಿ ಅವುಗಳ ಉದ್ಧಾರ ಮಾಡಬೇಕು. ಮತ್ತು ಈ ದಿನ ಜಿನವಾಣಿಯ ಪ್ರಸಾರದ ಕಾರ್ಯ ಮಾಡಬೇಕು. ಬಾಲಕರಿಗೆ ಧರ್ಮಜ್ಞಾನದ ಅಭ್ಯಾಸ ಮಾಡಿಸುವ ಪ್ರಯತ್ನ ಮಾಡಬೇಕು. ಮಿಥ್ಯಾತ್ವವನ್ನು ಬಿಡಬೇಕು. ಮತ್ತು ಇತರರಿಂದ ಬಿಡಿಸಬೇಕು. ಇದನ್ನೇ ಶ್ರುತಪಂಚಮಿಯು ನಮ್ಮೆಲ್ಲರಿಗೆ ಬೋಧಿಸುತ್ತದೆ.

ಈ ಸಿದ್ಧಾಂತಶಾಸ್ತ್ರಗಳಿಗೆ ಜಯವಾಗಲಿ !



# 51. ಸಿದ್ಧಸ್ಥಾನ ವರ್ಣನೆ

ಜೀವರುಗಳನ್ನು ಗತಿಚಕ್ರದಲ್ಲಿ ಸಿಲುಕಿಸಿ ತೊಳಲಿ ಬಳಲುವಂತೆ ಮಾಡಿರುವುದು ಕರ್ಮವೆಂಬ ಪ್ರಕೃತಿಯಾಗಿದೆ. ಜೀವರುಗಳ ಮನ ವಚನ ಕಾಯಗಳ ಕ್ರಿಯೆಗಳ ಶುಭಾಶುಭ ಪರಿಣಾಮಗಳಿಗನುಸಾರವಾಗಿ ಕರ್ಮವೆಂಬುದು ಆತ್ಮ ಪ್ರದೇಶದಲ್ಲಿ ಬಂಧವಾಗಿ ಪುಣ್ಯ ಪಾಪ ರೂಪದಿಂದ ಸುಖ-ದುಃಖವನ್ನು ಉಂಟು ಮಾಡುತ್ತ ಈ ಸಂಸಾರದಲ್ಲಿ ಸುತ್ತಿಸುತ್ತಿದೆ. ಈ ಕರ್ಮ ಪ್ರಕೃತಿಗಳು ಸ್ಥೂಲವಾಗಿ 8 ಪ್ರಕಾರವಾಗಿಯೂ ಇವಕ್ಕೆ ಮೂಲ ಪ್ರಕೃತಿಗಳೆಂತಲೂ ಇವುಗಳಲ್ಲಿ ವಿಂಗಡಣೆಯಾಗುವ 148 ವಿಭಾಗಗಳಿಗೆ ಉತ್ತರ ಪ್ರಕೃತಿಗಳೆಂತಲೂ ಹೆಸರುಂಟು. ಅವುಗಳಲ್ಲಿ ಮೂಲ ಪ್ರಕೃತಿಗಳಾದ ೧) ಜ್ಞಾನಾವರಣೀಯ, ೨) ದರ್ಶನಾವರಣೀಯ, ೩) ಮೋಹನೀಯ, ೪) ಅಂತರಾಯ, ೫) ಆಯುಷ್ಯ, ೬) ನಾಮ, ೭) ಗೋತ್ರ, ೮) ವೇದನೀಯ ಎಂಬ 8 ರೀತಿಯ ಕರ್ಮಗಳ ಬಲಾಬಲಗಳಿಗನುಸಾರವಾಗಿ ದೇವಗತಿ, ಮನುಷ್ಯಗತಿ, ನರಕಗತಿ, ತಿರ್ಯಂಚಗತಿಯಲ್ಲಿ ಹುಟ್ಟಿ ಸತ್ತು ತೊಳಲಿ ಬಳಲಬೇಕಾಗಿದೆ. ಈ ಗತಿಗಳಲ್ಲಿ ಸುಖ ಕ್ಷಣಿಕವಾದುದು. ಅದು ಇಂದ್ರಿಯಗಳ, ದೇಹದ, ಮನಸ್ಸಿನ ಅಧೀನವಾದ ಸುಖವಾಗಿದೆ ಇದು ಆತ್ಮಸುಖಕ್ಕೆ ಹೊರತಾಗಿದೆ. ದುಃಖವು ಮಹತ್ತರವಾಗಿ ಸಹಿಸಲಸದಳವಾಗಿದೆ. ಆದ್ದರಿಂದ ಅನೇಕ ಮಹಾತ್ಮರು ಈ ನಶ್ವರವಾದ ಸುಖಕ್ಕೆ ಹೇಸಿ, ನಿರಂತರವಾದ ಆತ್ಮನ ನೈಜ ಸುಖಸಾನ್ನಿಧ್ಯವನ್ನು ಹೊಂದಲು ಸಂಸಾರ ಶರೀರ ಭೋಗಾದಿಗಳನ್ನು ತೊರೆದು ಜ್ಞಾನ, ಧ್ಯಾನ, ತಪಸ್ಸಿನಲ್ಲಿ ನಿರತರಾಗಿ ಮೇಲೆ ಹೇಳಿದ ಜ್ಞಾನಾವರಣೀಯಾದಿ ಕರ್ಮಪ್ರಕೃತಿಗಳನ್ನು ನಾಶಮಾಡಿ ಮುಕ್ತಾತ್ಮನೆನಿಸಿ, ಸ್ವಾತ್ಮಸಿದ್ಧಿಯನ್ನು ಗಳಿಸಿ ಮೂರು ಲೋಕದ ಅಗ್ರಭಾಗದಲ್ಲಿರುವ ಸಿದ್ಧಸ್ಥಾನವನ್ನು ತಲುಪುತ್ತದೆ. ಜೀವನಿಗೆ ಊರ್ಧ್ವಗಮನತ್ವವೆಂಬ ಒಂದು ಗುಣವುಂಟು ಯಾವ ಆತ್ಮನಿಗೆ ಅಂಟಿದ್ದ ಕರ್ಮ ಪ್ರಕೃತಿಗಳು ನಾಶವಾಗುತ್ತಿದ್ದಂತೆಯೇ ಅದು ತನ್ನ ಸಹಜ ಗುಣವನ್ನು ಹೊಂದಿ ಊರ್ಧ್ವಲೋಕದ ತನ್ನ ಸ್ವಸ್ಥಾನವನ್ನು ತಲುಪುತ್ತದೆ. ಇದೇ ಆತ್ಮನಿಗೆ ಸ್ವರಾಜ್ಯವೂ ಆಗಿದೆ ಅನಾದಿಕಾಲದಿಂದಲೂ ಅನಂತಾತ್ಮರು ಸಕಲ ಕರ್ಮಗಳಿಂದ ಮುಕ್ತರಾಗಿ ಸಿದ್ಧಾತ್ಮರೆನಿಸಿ, ಪರಿಶುದ್ಧ ಪರಮಾತ್ಮರೆನಿಸಿ, ನಿರಂಜನರೆಂದೆನಿಸಿ, ಧ್ರುವವೂ, ಅಚಲವೂ, ಅನುಪಮವೂ ಆದ ಪದವಿಯನ್ನು ಪಡೆದು ಲೋಕಾಗ್ರದಲ್ಲಿರುವ

ಸಿದ್ಧಸ್ಥಾನವನ್ನು ತಲುಪುತ್ತಾರೆ. ಆಗ ಅವರು ೧) ಕ್ಷಾಯಿಕ ಸಮ್ಯಕ್ತ್ವ, ೨) ಕ್ಷಾಯಿಕದರ್ಶನ, ೩) ಕ್ಷಾಯಿಕಜ್ಞಾನ, ೪) ಕ್ಷಾಯಿಕವೀರ್ಯ, ೫) ಅವ್ಯಾಬಾಧತ್ವ, ೬) ಅವಗಾಹನತ್ವ, ೭) ಅಗುರುಲಘುತ್ವ, ೮) ಸೂಕ್ಷ್ಮತ್ವವೆಂಬ ಅಷ್ಟ ಗುಣಗಳನ್ನು ಹೊಂದಿ ಅನಂತ ಸುಖ ಶಾಂತಿ ಆನಂದವನ್ನು ಚಿರವಾಗಿ ಅನುಭವಿಸುತ್ತಾರೆ.

ಕರ್ಮಗಳ ಕೊನೆಯ ಅವಶೇಷಗಳನ್ನು ಕಳಚಿಕೊಂಡು ಶುದ್ಧರಾದ ಎಲ್ಲ ಪವಿತ್ರಾತ್ಮರುಗಳು ಆ ಸಿದ್ಧ ಸ್ಥಾನದಲ್ಲಿ ಶಾಶ್ವತವಾಗಿ ನೆಲೆಸಿರುತ್ತವೆ.

ಮೂರು ಲೋಕದಲ್ಲಿ ೮ ಪೃಥ್ವಿಗಳುಂಟು. ಅದಕ್ಕೆ ಸೂತ್ರ ಸಹಜಾನಂದಜೀಯವರ ಸಮಸ್ಥಾನಸೂತ್ರವೆಂಬ ಗ್ರಂಥದ ೩ ನೇ ಅಧ್ಯಾಯದ ೧೧ ನೇ ಸೂತ್ರದಲ್ಲಿ 'ರತ್ನ ಶರ್ಕರಾವಾಲುಕಾಪಂಕಧೂಮತಮೋ ಮಹಾತಮಃಪ್ರಭೇಷತ್ಪ್ರಾಗ್ಭಾರಾಃ ಪೃಥ್ವ್ಯಃ' ಎಂದು ತಿಳಿಸಿದ್ದಾರೆ. ಅಂದರೆ- ೧) ರತ್ನಪ್ರಭಾ, ೨) ಶರ್ಕರಾಪ್ರಭಾ, ೩) ವಾಲುಕಾಪ್ರಭಾ, ೪) ಪಂಕಪ್ರಭಾ, ೫) ಧೂಮಪ್ರಭಾ, ೬) ತಮಃ ಪ್ರಭಾ, ೭) ಮಹಾತಮಃಪ್ರಭಾ ಮತ್ತು ೮) ಈಷತ್ಪ್ರಾಗ್ಭಾರ ಎಂಬ ಎಂಟು ಪೃಥ್ವಿಗಳುಂಟು. ಇವುಗಳಲ್ಲಿ ಮೊದಲಿನ ಏಳು ಅಧೋಲೋಕದಲ್ಲೂ ಇದ್ದು ಅವೆಲ್ಲ ನರಕಗಳೆಂತಲೂ 8ನೆಯದಾದ ಈಷತ್ಪ್ರಾಗ್ಭಾರವು ಊರ್ಧ್ವ ಲೋಕದಲ್ಲಿದ್ದು ಅದೇ ಸಿದ್ಧಸ್ಥಾನವೆಂತಲೂ ಹೇಳಿದ್ದಾರೆ. ಆ ಸಿದ್ಧಸ್ಥಾನವು ಅಲೌಕಿಕವಾದ ಸುಖ ಸಾಮ್ರಾಜ್ಯವಾಗಿದೆ. ಅಲ್ಲಿ ಮೂರು ಲೋಕದಲ್ಲಿನ ಮೂರು ಕಾಲದಲ್ಲಿನ ಸುಖವು ಕ್ಷಣಮಾತ್ರದಲ್ಲಿ ದೊರೆಯುತ್ತದೆ. ಈ ಸಿದ್ಧಸ್ಥಾನವನ್ನು ಸಮರ್ಥಿಸುವ 4-5 ಗ್ರಂಥ ಗಳನ್ನು ಆಧಾರವಾಗಿ ತೆಗೆದುಕೊಂಡು ಅವುಗಳ ವಿಷಯವನ್ನು ತಿಳಿಸಲಾಗಿದೆ.

ಯತಿವೃಷಭಾಚಾರ್ಯರ 'ತಿಲೋಯಪಣ್ಣತ್ತಿ' ಎಂಬ ಗ್ರಂಥದಲ್ಲಿ ಸಿದ್ಧಸ್ಥಾನದ ವರ್ಣನೆ ಹೀಗಿದೆ -

ಊರ್ಧ್ವಲೋಕದಲ್ಲಿನ ಸ್ವರ್ಗದ ಕೊನೆಯದಾದ ಸರ್ವಾರ್ಥಸಿದ್ಧಿ ಸ್ವರ್ಗದ ಮೇಲೆ ಎಂಟನೆಯ ಪೃಥ್ವಿ ಇದೆ. ಇದು ಮೂರು ಲೋಕವನ್ನು ಆವರಿಸಿರುವ ಗಾಳಿಗಳಲ್ಲಿ ಕೊನೆಯದಾದ ತನುವಾತವಲಯಕ್ಕೆ ಅಂಟಿದಂತೆ ಇದೆ. ಇದರ ವಿಸ್ತಾರವು ಪೂರ್ವಪಶ್ಚಿಮವಾಗಿ 1 ರಜ್ಜು, ಉತ್ತರ ದಕ್ಷಿಣವಾಗಿ ಸ್ವಲ್ಪ ಕಡಿಮೆ 7 ರಜ್ಜು ಮತ್ತು ಎಂಟು ಯೋಜನ ಬಾಹುಳ್ಯ ಉಳ್ಳದ್ದಾಗಿಯೂ ಇದೆ.

"ದಕ್ಷಿಣಉತ್ತಭಾವಿ
ದೀಹಾ ಕಿಂಚೂಣ ಸತ್ತ ರಜ್ಜೂಓ ॥



ವೇತ್ತಾಸಣಸಂಠಾಣಾ ಸಾ
ಪುಢವೀ ಅಟ್ಠಜೋಯಣಾ ಬಹುಲಾ ॥"

(ತಿ.ಪ.ಸಾ. 8-6)

ಹಾಗೆಯೇ-

ಏದಾಏ ಬಹುಮಜ್ಝೇ
ಖೇತ್ತಂ ಣಾಮೇಣ ಈಸಿಪಭ್ಭಾರಂ ।
ಅಜ್ಜುಣಸುವಣ್ಣಸರಿಸಂ
ಣಾಣಾರಯಣೇಹಿಂ ಪರಿಪುಣ್ಣಂ ॥ ೩-೬೫೭

ಎಂಟನೆಯ ಪೃಥ್ವಿಯ ಬಹು ಮಧ್ಯಭಾಗದಲ್ಲಿ ಸುವರ್ಣಸದೃಶವಾದ ನಾನಾ ರತ್ನಗಳಿಂದ ಪರಿಪೂರ್ಣವಾದ ಈಷತ್ಪ್ರಾಗ್ಭಾರವೆಂಬ ಸಿದ್ಧಸ್ಥಾನವಿದೆ. ಇದು ಊರ್ಧ್ವಮುಖವಾದ ಧವಳ ಛತ್ರಾಕಾರದಂತೆ ಸುಂದರವಾಗಿದೆ. ಇದು 45 ಲಕ್ಷ ಯೋಜನ ವಿಸ್ತೃತವಾಗಿದೆ. ಇದರ ಮಧ್ಯಭಾಗವು 8 ಯೋಜನ ದಪ್ಪವೂ ಕೊನೆ ಕೊನೆಯಲ್ಲಿ ಒಂದು ಅಂಗುಲ ಮಾತ್ರ ದಪ್ಪ ಉಳ್ಳದ್ದಾಗಿದೆ. ಹೀಗೆ ಊರ್ಧ್ವಲೋಕದ ಎಂಟನೆಯ ಭೂಮಿಯಲ್ಲಿ ಈಷತ್ಪ್ರಾಗ್ಭಾರವೆಂಬ ಸಿದ್ಧಸ್ಥಾನದ ಪರಿಧಿಯು (ಸುತ್ತಳತೆ) ಈ ಮಧ್ಯಲೋಕದ ಮನುಷ್ಯ ಕ್ಷೇತ್ರದಷ್ಟೇ ಅಂದರೆ $2^1/_2$ ದ್ವೀಪದಷ್ಟು ಇದೆ.

ತಿಲೋಯ ಪಣ್ಣತ್ತಿಯಲ್ಲಿ ಎಂಟನೆಯ ಪೃಥ್ವಿಗೆ ಈಷತ್ಪ್ರಾಗ್ಭಾರವೆನ್ನದೆ ಅದರ ಮಧ್ಯದ ಸಿದ್ಧಶಿಲೆಗೆ ಈಷತ್ಪ್ರಾಗ್ಭಾರವೆಂದು ಹೇಳಿದ್ದಾರೆ. ಶ್ರೀಮನ್ನೇಮಿಚಂದ್ರಾಚಾರ್ಯರ ತ್ರಿಲೋಕಸಾರದಲ್ಲಿ ಎಂಟನೆಯ ಪೃಥ್ವಿಗೇನೇ ಈಷತ್ಪ್ರಾಗ್ಭಾರವೆಂದಿದ್ದಾರೆ. ಅದಕ್ಕೆ ಸೂತ್ರ -

ತಿಹುವಣಮುಡ್ಢಾರೂಢಾ
ಈಸಿಪಭಾರಾ ಧರಟ್ಠಮೀ ರುಂದಾ ।
ದಿಗ್ಘಾ ಇಗಿಸಗರಜ್ಜೂ
ಅಡಜೋಯಣಪಮಿದ ಬಾಹಲ್ಲಾ ॥೫೫೬॥

ತ್ರಿಲೋಕದ ಶಿಖರದ ಮೇಲೆ ಈಷತ್ಪ್ರಾಗ್ಭಾರವೆಂಬ ಎಂಟನೆಯ ಪೃಥ್ವಿ ಇದೆ. ಅದು ಒಂದು ರಜ್ಜು ಅಗಲ ಮತ್ತು ಏಳು ರಜ್ಜು ಉದ್ದ ಮತ್ತು ಎಂಟು ಯೋಜನ ಬಾಹುಲ್ಯ ಉಳ್ಳದ್ದಾಗಿದೆ.

ತಮ್ಮಜ್ಝೇ ರೂಪ್ಪಮಯಂ
ಛತ್ತಾಯಾರಂ ಮಣುಸ್ಸಮಹಿವಾಸಂ ।
ಸಿದ್ಧಕ್ಖೇತ್ತಂ ಮಜ್ಝಡವೇಹಂ
ಕಮಹೀಣ ಬೇಹುಲಿಯಂ ॥೫೫೭॥

ಈಷತ್ಪ್ರಾಗ್ಭಾರವೆಂಬ ಎಂಟನೆಯ ಪೃಥ್ವಿಯ ಮಧ್ಯದಲ್ಲಿ ಊರ್ಧ್ವಮುಖವುಳ್ಳ ಧವಳ ಛತ್ರಾಕಾರ ಅಥವಾ ಅರ್ಧಚಂದ್ರಾಕಾರವಾಗಿ 45 ಯೋಜನ ಪ್ರಮಾಣ ಅಂದರೆ ಮನುಷ್ಯಲೋಕವಾದ $2^1/_2$ ದ್ವೀಪದಷ್ಟು ವಿಸ್ತಾರವಾಗಿ ಸಿದ್ಧಕ್ಷೇತ್ರವಿದೆ. ಅದರ ಗಾತ್ರವು ಮಧ್ಯದಲ್ಲಿ 8 ಯೋಜನವೂ ಮುಂದೆ ಕ್ರಮಕ್ರಮವಾಗಿ ಕಡಿಮೆಯಾಗುತ್ತಲೂ ಹೋಗುತ್ತದೆ.

ಉತ್ತಾಣಟ್ಠಿಯಮಂತೇ
ಪತ್ತಂ ವತಣು ತದುವರಿ ತಣುವಾದೇ ।
ಅಟ್ಠಗುಣಡ್ಢಾ ಸಿದ್ಧಾ
ಚಿಟ್ಠಂತಿ ಅಣಂತಸುಹತಿತ್ತಾ ॥೫೫೯॥

ಆ ಸಿದ್ಧಕ್ಷೇತ್ರದ ಮೇಲೆ ತನುವಾತವಲಯದಲ್ಲಿ ಅಷ್ಟಗುಣಯುಕ್ತರಾಗಿ ಅನಂತಗುಣ ಸಂತುಷ್ಟರಾಗಿ ಸಿದ್ಧಭಗವಾನರು ವಿರಾಜಮಾನರಾಗಿರುತ್ತಾರೆ. ಆ ಸಿದ್ಧಕ್ಷೇತ್ರವು ಊರ್ಧ್ವಮುಖವುಳ್ಳ ಪಾತ್ರೆಯಂತಿದೆ (ಅರ್ಧಚಂದ್ರಾಕಾರವಾಗಿ).

ಈ ಸಿದ್ಧಸ್ಥಾನದಲ್ಲಿನ ಸಿದ್ಧಾತ್ಮರ ಸುಖವೆಂತಹುದೆಂದು ಇದೇ ಗ್ರಂಥದಲ್ಲಿ ಹೀಗೆ ನಿರೂಪಿಸಿದ್ದಾರೆ -

ಚಕ್ಕಿಕುರುಫಣಿಸುರಿಂದೇ
ಸಹಮಿಂದೇ ಜಂ ಸುಹಂ ತಿಕಾಲಭವಂ ।
ತತ್ತೋ ಅಣಂತಗುಣಿದಂ
ಸಿದ್ಧಾಣಂ ಖಣಸುಹಂ ಹೋದಿ ॥೫೬೦॥

ಮಾನವರಲ್ಲಿ ಚಕ್ರವರ್ತಿಯ ಸುಖವೇ ಉತ್ತಮವಾದುದು. ಚಕ್ರವರ್ತಿಗಿಂತ ಅನಂತ ಪಟ್ಟು ಸುಖವು ಭೋಗಭೂಮಿಜರಿಗುಂಟು. ಅವರಿಗಿಂತ ಅನಂತ ಪಟ್ಟು ಸುಖ ಧರಣೇಂದ್ರನಿಗುಂಟು. ಅವನಿಗಿಂತ ಅನಂತ ಪಟ್ಟು ಸುಖ ದೇವೇಂದ್ರನಿಗುಂಟು. ಅವನಿಗಿಂತ ಅನಂತ ಪಟ್ಟು ಸುಖ ಅಹಮಿಂದ್ರನಿಗುಂಟು. ಹೀಗೆ ಇವರೆಲ್ಲ ಭೂತ, ಭವಿಷತ್, ವರ್ತಮಾನ ಕಾಲದಲ್ಲಿ ಅನುಭವಿಸುವ ಅನಂತ



ಸುಖವನ್ನು ಒಮ್ಮೆಲೇ ಕ್ಷಣಕ್ಷಣಕ್ಕೂ ಆ ಸಿದ್ಧಾತ್ಮನು ಅನುಭವಿಸುತ್ತನೆ. ಅಂದರೆ ಸಿದ್ಧರ ಸುಖವು ಅಗಣಿತವೂ ಅನಂತವೂ ಅನರ್ಘ್ಯವೂ, ಅನುಪಮವೂ, ಆಗಿದೆ. ಅವರ ಸುಖಕ್ಕೆ ಸರಿಮಿಗಿಲೆನಿಸುವುದು ಈ ಲೌಕಿಕದಲ್ಲಿ ಮತ್ತಾವುದೂ ಇಲ್ಲ.

ಭಟ್ಟಾಕಲಂಕರ ರಾಜವಾರ್ತಿಕವೆಂಬ ಗ್ರಂಥದ ಅಂತ್ಯದಲ್ಲಿ ಸಿದ್ಧಸ್ಥಾನದ ವರ್ಣನೆಯು ಹೀಗಿದೆ :

ತನ್ವೀ ಮನೋಜ್ಞಾ ಸುರಭಿಃ ।
ಪುಣ್ಯಾ ಪರಮಭಾಸುರಾ ।
ಪ್ರಾಗ್ಭಾರಾ ನಾಮ ವಸುಧಾ ।
ಲೋಕಮೂರ್ಧ್ನಿ ವ್ಯವಸ್ಥಿತಾ ॥19॥
ನೃಲೋಕತುಲ್ಯವಿಷ್ಕಂಭಾ
ಸಿತಚ್ಛತ್ರನಿಭಾ ಶುಭಾ ।
ಊರ್ಧ್ವಂ ತಸ್ಯಾಃಕ್ಷಿತೇಃ ಸಿದ್ಧಾಃ
ಲೋಕಾಂತೇ ಸಮವಸ್ಥಿತಾಃ ॥20॥

ತ್ರಿಲೋಕದ ಮಸ್ತಕದಲ್ಲಿ ಪ್ರಾಗ್ಭಾರವೆಂಬ ಪೃಥ್ವಿಯಿದೆ. ಅದು ಮನೋಜ್ಞವೂ ಸುಗಂಧಯುಕ್ತವೂ ಪವಿತ್ರವೂ ಮತ್ತು ದೇದೀಪ್ಯಮಾನವೂ ಆಗಿದೆ. ಆ ಪೃಥ್ವಿಯು ನರಲೋಕದಷ್ಟು ($2^1/_2$ ದ್ವೀಪ) ವಿಸ್ತಾರವಾಗಿದೆ. ಅದು ಶ್ವೇತ ವರ್ಣದ ಛತ್ರಾಕಾರವೂ ಸದಾ ಶುಭ್ರವೂ ಆಗಿದೆ. ಈ ಪೃಥ್ವಿಯ ಮೇಲೆ ಲೋಕಾಂತ್ಯ ಭಾಗದಲ್ಲಿ ಸಿದ್ಧಭಗವಾನರು ವಿರಾಜಮಾನರಾಗಿದ್ದಾರೆ.

ಮಾಘನಂದ್ಯಾಚಾರ್ಯರ ಶಾಸ್ತ್ರಸಾರಸಮುಚ್ಚಯ ಹಾಗೂ ಪದಾರ್ಥಸಾರವೆಂಬ ಗ್ರಂಥಗಳಲ್ಲಿ ಸಿದ್ಧಸ್ಥಾನದ ವರ್ಣನೆ ಹೀಗಿದೆ :

"ಆ ಸರ್ವಾರ್ಥಸಿದ್ಧಿಯಿಂ ಮೇಲೆ ದ್ವಾದಶಯೋಜನಂ ಪೋದಲ್ಲಿ ಮೂಲೋಕಾಗ್ರದ ಈಷತ್ಪ್ರಾಗ್ಭಾರಮೆಂ ಬೆಂಟನೆಯ ಭೂಮಿಯೊಳು ದಕ್ಷಿಣೋತ್ತರದೊಳೇಳು ರಜ್ಜು ಪೂರ್ವಾಪರದೊಳೊಂದು ರಜ್ಜುವಿನಗಲ ದದರ ಮಧ್ಯದೊಳು ಮನುಷ್ಯಕ್ಷೇತ್ರದನಿತು ವಿಸ್ತೀರ್ಣಮುಂಗೋಳಕಾರ್ಧ ಸದೃಶಮುಂ, ಶುದ್ಧಸ್ಫಟಿಕಮಯಮಪ್ಪ ಅಷ್ಟಯೋಜನ ಬಾಹುಲ್ಯ ಮಪ್ಪ ಸಿತಾವನಿ ಎಂಬ ಸಿದ್ಧ ಶಿಲೆಯ ಮೇಲೆರಡುಮೊಂದೇ ನಾಲ್ಕೂರಿಪ್ಪತ್ತೈದು ಬಿಲ್ಲುಗುಂದಿದೊಂದು ಕ್ರೋಶ ಪ್ರಮಾಣದ ಘನೋದಧಿ ಘನಾನಿಲ ತನುವಾತಮಿರ್ಕುಮಾ ತನುವಾತಮನೊಂಭತ್ತು

ಲಕ್ಷ ಭಾಗಂ ಮಾಡಿದಲ್ಲಿ ಮೇಗಣೊಂದು ಭಾಗದಲ್ಲಿ ಜಘನ್ಯಾವಗಾಹನದಲ್ಲಿ ಸಿದ್ಧರಿರುವರು. ಸಾಸಿರದೈ ನೂರು ಭಾಗಂ ಮಾಡಿದಲ್ಲಿ ಕಡೆಯೊಂದು ಭಾಗದೊಳು ಉತ್ಕೃಷ್ಟಾವಗಾಹನದಲ್ಲಿ ಸಿದ್ಧರಿರುವರು. ಜಘನ್ಯವೆಂಬುದು ಮೂರುವರೆ ಮೊಳನುತ್ಕೃಷ್ಟಮಪ್ಪುದು ಐನೂರಿಪ್ಪತ್ತೈದು ಚಾಪ ಪ್ರಮಾಣಮಕ್ಕುಂ. ಅಲ್ಲಿ ಮಧ್ಯಮಾವಗಾಹನಂ ನಾನಾ ಭೇದಮಕ್ಕುಂ. ಆ ಸಿದ್ಧತ್ವಕ್ಕೆ ಮಧ್ಯಮ ಲೋಕದೊಳು ಅಮಲ ಸಹಜಾನುಷ್ಠಾನದಿಂದ ಕರ್ಮಮಲಕಲಂಕಮಂ ನಿರ್ಮೂಲಂ ಮಾಡಿ ಸಿದ್ಧಾತ್ಮರಪ್ಪರು. ಆ ಸ್ಥಾನಮದೆಂತಪ್ಪುದೆಂದೊಡೆ ಸಿದ್ಧಸ್ವಾತ್ಮೋಪಲಬ್ಧಿ, ಪರಮಾತ್ಮ ಸ್ಥಾನಂ, ಪವಿತ್ರಂ, ಕಲ್ಯಾಣಂ, ಸುಗತಿಲೋಕೋತ್ತರಂ, ಪರಮಪದಂ, ಅಕ್ಷಯಂ, ಅನಂತಂ. ಶಾಶ್ವತಂ, ಅಜರಾಮಂ, ಅಭವ್ಯರ್ಗೆ ಅಗಮ್ಯಂ, ಭವ್ಯರ್ಗೆಯ್ದ ಲುಪಡುವುದುಂ, ಸಮ್ಯಗ್ ಜ್ಞಾನಿಗಳಿಂ ಬಯಸಲ್ಪಡುವುದುಂ ಅದು ಮೋಕ್ಷಮೆಂಬುದು, ಇದು ಊರ್ಧ್ವಲೋಕದ ವರ್ಣನಂ.'

ಮೇಲ್ಕಂಡ ಹಳೆಗನ್ನಡದ ಗದ್ಯ ಸುಲಭವಾಗಿಯೇ ಅರ್ಥವಾಗುತ್ತದೆ. ಅದರ ಅರ್ಥವನ್ನು ಮತ್ತೆ ಹೇಳಬೇಕಾಗಿಲ್ಲ. -ಕೊನೆಯಲ್ಲಿ ಸಾರಾಂಶವಿಷ್ಟೇ:-

ಸಂಸಾರದಲ್ಲಿ ತೊಳಲುವ ಜೀವಕ್ಕೆ ಅಷ್ಟಕರ್ಮಗಳು ಕವಿದಿರುವ ಕಾರಣ ನೈಜ ಸುಖಾನಂದವನ್ನು ಅನುಭವಿಸಲಾಗಿಲ್ಲ. ಈ ಜೀವಕ್ಕೆ ಇಂದ್ರಿಯಗಳ ನೆರವಿನಿಂದ ಅಲ್ಪವಾದ ಸುಖ ಮತ್ತು ಜ್ಞಾನಗಳು ದೊರೆಯುತ್ತವೆ. ಈ ಕರ್ಮದ ಕಾಟದಿಂದ ದೂರಾದ ಸಿದ್ಧರಿಗೆ ಎಳ್ಳನಿತೂ ಅಡೆತಡೆ ಇಲ್ಲದ ಸಹಜಾನಂದ ಸುಖ ಜ್ಞಾನಗಳು ದೊರೆಯುತ್ತವೆ. ಆದುದರಿಂದ ಸಿದ್ಧರ ಚೇತನ ಶಕ್ತಿಯು ತ್ರಿಕಾಲವನ್ನೂ, ತ್ರಿಲೋಕವನ್ನೂ ಏಕಕಾಲದಲ್ಲಿ ಗ್ರಹಿಸಬಲ್ಲದು. ಇದರಿಂದಲೇ ಈ ಪರಮಾತ್ಮನಿಗೆ ಸರ್ವದರ್ಶಿ ಎಂದೂ ಕರೆಯುತ್ತಾರೆ. ಇದೇ ಆತ್ಮನ ಸಹಜಸ್ವರೂಪ. ಇವರ ಸುಖ ನಿರುಪಾಧಿಕವೂ, ಸ್ವರೂಪನುಭವಾನಂದವೂ ಆದುದು. ಇಂತಹ ಪರಿಶುದ್ಧಾತ್ಮ ಸಿದ್ಧಪರಮೇಷ್ಠಿಗಳು ನೆಲೆಯಾಗಿ ನಿಲ್ಲುವ ಸ್ಥಾನವಾದ ಸಿದ್ಧಲೋಕವೂ ಪವಿತ್ರವಾದು.

ರತ್ನಾಕರವರ್ಣಿಯು ಸಿದ್ಧಸ್ಥಾನ ವರ್ಣನೆಯನ್ನು ತನ್ನ ತ್ರಿಲೋಕ ಶತಕದಲ್ಲಿ ಹೀಗೆ ಮಾಡಿದ್ದಾನೆ:-

ಕಂದ ಪದ್ಯ-

ಸರ್ವಾರ್ಥಸಿದ್ಧಿಯಿಂಮೇ।
ಲುರ್ವದ ಪನ್ನೆರಡು ಯೋಜನಂ ಪೋದೆಡೆಯೊಳ್॥



ತೋರ್ಪುದೆಂಟನೆಯ ಭೂಮಿ ತ-।
ದುರ್ವಿಯ ಮೇಲ್ಮುಟ್ಟಿ ಸಿದ್ಧಶಿಲೆಯೆಸದಿರ್ಕುಂ॥೮೩॥

ಸರ್ವಾರ್ಥಸಿದ್ಧಿ ಸ್ವರ್ಗದ ಮೇಲೆ ಹನ್ನೆರಡು ಯೋಜನ ಹೋದ ಮೇಲೆ ಎಂಟನೆಯ ಭೂಮಿಯು ತೋರುವುದು. ಆ ಭೂಮಿಯ ಮೇಲೆ ಸಿದ್ಧಶಿಲೆಯು ಶೋಭಿಸುತ್ತಿರುವುದು.

ಕಡು ಬಿಳಿದು ಬಟ್ಟಿತದು ಬೆ-।
ಳ್ಗೊಡೆಯಂತೆಸಿದಿರ್ಪುದೆಂಟು ಗಾವುದದಟ್ಟಂ॥
ಪೊಡವಿಯೊಳಪ್ರತಿಯದು ಪೇ-।
ಳ್ವೊಡೆ ನಾಲ್ವತ್ತೈದು ಲಕ್ಷ ಯೋಜನದಗಲಂ॥೮೪॥

ಅದು ಬಹಳ ಬಿಳಿದಾಗಿಯೂ (ಶ್ವೇತಛತ್ರ) ದುಂಡಾಗಿಯೂ, ಎಂಟು ಗಾವುದ ದಪ್ಪವಾಗಿಯೂ, ನಲವತ್ತೈದು ಲಕ್ಷ ಯೋಜನ ವಿಸ್ತಾರವಾಗಿಯೂ, ಶ್ವೇತಛತ್ರದಂತೆ ಶೋಭಿಸುತ್ತಿರುವುದು.

ಮಿಗೆಸಿದ್ಧಶಿಲೆಯ ಮೇಲೀ।
ಜಗಮಂ ಮುಸುಕಿರ್ದ ಮೂರು ಗಾಳಿಗಳಿರ್ಕುಂ॥
ಗಗನಮೊಂದಲ್ಲದಾ ಗಾ-।
ಳಿಗಳಿಂದಂ ಪೊರೆಗೆ ಮಿಕ್ಕ ವಸ್ತುಗಳಿಲ್ಲಂ ॥೮೫॥

ಸಿದ್ಧಶಿಲೆಯ ಮೇಲೆ ಈ ಲೋಕವನ್ನು ಹೆಚ್ಚಾಗಿ ಆವರಿಸಿರುವ ಘನೋದಧಿ, ಘನವಾತ, ತನುವಾತಗಳೆಂಬ ಮೂರು ಗಾಳಿಗಳಿರುತ್ತವೆ, ಆ ಗಾಳಿಗಳಿಂದ ಹೊರಗೆ ಆಕಾಶ ಮಾತ್ರವಲ್ಲದೆ ಇತರ ವಸ್ತುಗಳಿಲ್ಲ.

ಅರೆಗಾವುದಂ ಘನೋದಧಿ।
ಹರಿದಾರಿಯ ದಟ್ಟಮಾ ಘನಾನಿಲಮಮರ್ದಿ॥
ಕಿರೆ ನಾನೂರಿಪ್ಪತ್ತೈ-
ದುರುಧನು ಕುಂದೆನಿಪ ದಟ್ಟಮಾ ತನುವಾತಂ ॥೮೬॥

ಘನೋದಧಿಯು 2 ಹರಿದಾರಿ ದಪ್ಪವಾಗಿದೆ, ಘನವಾತವು 1 ಹರಿದಾರಿ ದಪ್ಪವಾಗಿದೆ. ತನುವಾತವು 425 ಬಿಲ್ಲು ಕಡಿಮೆಯಾದ 1 ಹರಿದಾರಿ ದಪ್ಪವಾಗಿರುತ್ತದೆ.

ಆ ಮೂರು ಗಾಳಿಗಳೊಳು-।
ದ್ದಾಮದೊಳಾಕಡೆಯ ವಾಯುವಲಯದೊಳಿರ್ಪರ್॥

ಶ್ರೀಮತ್ಸಿದ್ಧಬುದ್ಧರ್।
ಸ್ವಾಮಿಗಳತಿಶುದ್ಧರವರೆಯುಪಮಾತೀತರ್॥೮೭॥

ಆ ಮೂರು ಗಾಳಿಗಳಲ್ಲಿ ಕೊನೆಯದಾದ ಆ ತನು ವಾತವಲಯದಲ್ಲಿ ಜ್ಞಾನಿಗಳೂ, ಮೋಕ್ಷಲಕ್ಷ್ಮಿಗೆ ಅಧಿಪತಿಗಳೂ, ಅತ್ಯಂತ ಪವಿತ್ರರೂ, ಆದ ಶ್ರೀಮತ್ಸಿದ್ಧ ಪರಮೇಷ್ಠಿಗಳಿರುತ್ತಾರೆ. ಮೂರು ಲೋಕದಲ್ಲಿ ಯಾರೂ ಅವರಿಗಿಂತ ಶ್ರೇಷ್ಠರಿಲ್ಲ.

ಕಾಯೋತ್ಸರ್ಗಂ ಪಲ್ಯಂ।
ಕಾಯತಮೆಂಬೆರಡರಲ್ಲಿ ಮಿಸುಕದೆ ಮೆರೆವರ್॥
ಶ್ರೇಯೋಲಕ್ಷ್ಮಿಯನಪ್ಪಿಸು।
ಖಾಯತಿ ತಲೆಗೇರಿ ಪರವಶಂ ತಟ್ಟಿದವೋಲ್ ॥೮೮॥

ಆ ಸಿದ್ಧಪರಮೇಷ್ಠಿಗಳು ಶ್ರೇಯೋಲಕ್ಷ್ಮಿಯನ್ನಾಲಂಗಿಸಿ ಸುಖಾಧಿಕ್ಯವು ತಲೆಗೇರಿ ಪರಾಧೀನತೆಯನ್ನು ಹೊಂದುವಂತೆ ಕಾಯೋತ್ಸರ್ಗದಲ್ಲಿ ಅಥವಾ ಪಲ್ಯಂಕಾಸನದಲ್ಲಿ ಚಲಿಸದೆ ವಿರಾಜಮಾನರಾಗಿರುತ್ತಾರೆ.

ಕುಂದಿದೊಡೆ ಮೂರುವರೆ ಮೊಳ-।
ದಿಂದಂ ಕಿರಿದಿಲ್ಲ ಪೆರ್ಚಿದಂದವರುದ್ದಂ॥
ಮುಂದೈನೂರಿಪ್ಪತ್ತೈ।
ದೆಂದೆನಿಪ ಧನುರ್ಮಿತಂ ಬಹುಕ್ರಮವೆಡೆಯೊಳ್॥೮೯॥

ಆ ಸಿದ್ಧ ಪರಮೇಷ್ಠಿಗಳ ಉದ್ದ ಅಳತೆಯಲ್ಲಿ ಅತಿ ಕಡಿಮೆ ಎಂದರೆ ಮೂರುವರೆ ಮೊಳಕ್ಕಿಂತ ಕಡಿಮೆಯಿಲ್ಲ. ಹೆಚ್ಚೆಂದರೆ ಐದುನೂರಿಪ್ಪತ್ತೈದು ಬಿಲ್ಲಿಗಿಂತ ಹೆಚ್ಚಿಲ್ಲ. ಇವರೆರಡರ ಮಧ್ಯದಲ್ಲಿ ಹಲವು ಅಳತೆಗಳಿರುತ್ತವೆ. ಅಂದರೆ ಕರ್ಮಕ್ಷಯ ಮಾಡುವ ಚರಮ ಶರೀರ ಎಷ್ಟು ಅಳತೆಯಾದ್ದಾಗಿರುತ್ತದೋ ಅ ಅಂತ್ಯ ಶರೀರದ ಆಕೃತಿಯಷ್ಟು ಸಿದ್ಧಾಕೃತಿಯು ಸಿದ್ಧಶಿಲೆಯನ್ನು ಸೇರುತ್ತದೆ. ಈ ಅಳತೆಯು ಭೂಮಿಯಲ್ಲಿ ಜನ್ಮತಾಳಿದ ಮಾನವಾಕೃತಿಯು ದೇಶ, ಕಾಲಗಳಿಗೆ ಅನುಸರಿಸಿರುತ್ತದೆ.

ಕುಂದು ಪೆರ್ಚುದ್ದದೊಳಗುಂ-।
ಟೊಂದಚ್ಚರಿ ಮೇಲೆ ನೋಳ್ಪೊಡವರ ಶಿರಂಗಳ್॥
ಒಂದೇ ಸರಿತದೊಳ್ಪರ್ವು।
ಸಂದ ಸುಖಂ ಶಕ್ತಿ ಬೋಧಮೆಲ್ಲ ಸಮಾನಂ ॥೯೦॥



ಉದ್ದಳತೆಯಲ್ಲಿ ಹೆಚ್ಚು ಕಡಿಮೆ ಇದ್ದರೂ ಒಂದಾಶ್ಚರ್ಯವೇನೆಂದರೆ ಮೇಲೆ ನೋಡಿದರೆ ಅವರ ತಲೆಗಳು ಒಂದೇ ಸಮಾನಾಂತರದಲ್ಲಿರುತ್ತವೆ ಅವರಿಗೆ ಪ್ರಾಪ್ತವಾಗಿರುವ ಸುಖ, ಶಕ್ತಿ, ಜ್ಞಾನವೆಲ್ಲವೂ ಒಂದೇ ಸಮನಾಗಿರುತ್ತದೆ. ಅದರಲ್ಲಿ ಹೆಚ್ಚು ಕಡಿಮೆ ಇರುವುದಿಲ್ಲ.

ಎಂಟು ಕರ್ಮರಹಿತನೂ, ಎಂಟು ಗುಣಸಹಿತನೂ, ಎಂಟನೆಯ ಭೂಮಿ ವಾಸಿತನೂ ಆದ ಸಿದ್ಧಪರಮೇಷ್ಠಿಗೆ ಸದಾ ಆ ಸಿದ್ಧಪದದ ಪ್ರಾಪ್ತಿಗಾಗಿ ಮನವಚನ. ಕಾಯ ಶುದ್ಧಿಯಿಂದ ನಮಸ್ಕರಿಸುತ್ತೇನೆ.

## 52. ಇದು ಟೀಕೆಯಲ್ಲ, ಎಚ್ಚರಿಕೆ

ಒಂದು ಧರ್ಮವು ಸ್ಥಿರವಾಗಿ ನಿಲ್ಲಬೇಕಾದರೆ, ವಿಕಾಸಗೊಂಡು ಪ್ರಬುದ್ಧಮಾನಕ್ಕೆ ಬರಬೇಕಾದರೆ ಪ್ರಚಾರ ಮತ್ತು ಪ್ರಭಾವನೆಯಾಗಬೇಕೆಂಬ ಮಾತು ನಿರ್ವಿವಾದವಾದುದು. ತೀರ್ಥಂಕರರ ದಿವ್ಯವಾಣಿಯನ್ನು ಗಣಧರರೂ, ಕೇವಲಿ ಶ್ರುತಕೇವಲಿಗಳೂ ಮತ್ತು ಆಚಾರ್ಯರುಗಳೂ ಪ್ರಚಾರ ಮಾಡುತ್ತ, ಪ್ರಭಾವನೆ ಮಾಡುತ್ತ ಬಂದ ಕಾರಣದಿಂದಲೇ ಜೈನಧರ್ಮವು ಅನಾದಿಕಾಲದಿಂದಲೂ, ಇಂದಿನವರೆಗೂ, ಮುಂದೆಯೂ ಶಾಶ್ವತವಾಗಿ ಉಳಿಯಲು ಕಾರಣವಾಯಿತು.

ವರ್ತಮಾನ ಕಾಲದ ಅಂತಿಮ ತೀರ್ಥೇಶರಾದ ಭ.ಮಹಾವೀರಸ್ವಾಮಿಯ ನಂತರ ಭದ್ರಬಾಹು ಶ್ರುತ ಕೇವಲಿಗಳು ಉತ್ತರ ಭಾರತದಲ್ಲಿ ಆಗ ಉಂಟಾದ ಉಪದ್ರವದ ಕಾರಣ ಚಂದ್ರಗುಪ್ತರಾಜನೊಂದಿಗೆ 12 ಸಹಸ್ರ ಜನ ಶಿಷ್ಯರೊಡನೆ ಕ್ರಿ.ಪೂ, ನಾಲ್ಕನೆಯ ಶತಮಾನದಲ್ಲಿಯೇ ದಕ್ಷಿಣಕ್ಕೆ ಬಂದು ಶ್ರವಣ ಬೆಳಗೊಳದಲ್ಲಿ ನೆಲೆಸಿದರು. ಅವರ ಶಿಷ್ಯರು ದಕ್ಷಿಣದ ವಿವಿಧ ದೇಶಗಳಲ್ಲಿ ಧರ್ಮ ಪ್ರಭಾವನೆ ಮಾಡಿದ್ದರಿಂದ ಜೈನಧರ್ಮದ ಕೀರ್ತಿಧ್ವಜವುದಿಗಂತಕ್ಕೇರಿ ಜೈನಧರ್ಮದ ಹಿರಿಮೆಯು ಮೂಲೆ ಮೂಲೆಗೂ ಹಬ್ಬಿತು.

ಅಂದು ನಟ್ಟ ಧರ್ಮವೃಕ್ಷವು ಇಂದಿಗೂ ಒಣಗದಂತೆ ಕಂಗೊಳಿಸಿ ಅನೇಕ ಆಚಾರ್ಯರು, ವಿದ್ವಾಂಸರು, ಪ್ರಭಾವಶಾಲಿಗಳೆಂಬ ಫಲಭರಿತವಾಗಿ

ಕಂಗೊಳಿಸುತ್ತದೆ. ಆದರೆ ಈ ಧರ್ಮವೃಕದ ಫಲದ ರುಚಿಯನ್ನು ಈಗ ಅನುಭವಿಸುತ್ತಿರುವವರು ಉತ್ತರದ ಧರ್ಮಬಾಂಧವರಾಗಿದ್ದಾರೆ. ಅಂದರೆ ಇಲ್ಲಿ ಜನಿಸಿದ ಅನೇಕ ತ್ಯಾಗಿಗಳೂ, ವಿದ್ವಾಂಸರೂ ಉತ್ತರದಲ್ಲಿ ಪ್ರಭಾವನೆ ಮಾಡುತ್ತ ಪೂಜ್ಯರಾಗಿದ್ದಾರೆ. ಆ ಸವಿಯನ್ನು ನಾವರಿಯದವರಾಗಿದ್ದೇವೆ. ಇರಲಿ; ಅಂದು ಹಲವು ರಾಜ, ಮಹಾರಾಜಾದಿಗಳು ಜೈನಧರ್ಮ ಪ್ರಭಾವನೆಗೊಳಗಾಗಿ ಧರ್ಮಾವಲಂಬಿಗಳಾಗಿ ಪರಮ ಭಕ್ತರಾದರು. ಆದ್ದರಿಂದ ಇಲ್ಲಿ ಜೈನ ವಾಙ್ಮಯವು ವಿಪುಲವಾಗಿ ಬೆಳೆದು ಧರ್ಮ ದರ್ಶನದೊಡನೆ ಸಾಹಿತ್ಯದರ್ಶನವೂ ಆಗುವಂತಾಯಿತು. ಕುಂದಕುಂದಾಚಾರ್ಯರು, ಉಮಾಸ್ವಾಮಿಗಳು, ಸಮಂತ ಭದ್ರರೂ, ಜಿನಸೇನರೇ ಮುಂತಾದ ಆಚಾರ್ಯರು ಜೈನ ಗ್ರಂಥಗಳನ್ನು ರಚಿಸಿ ಜನತೆಯಲ್ಲಿ ಧರ್ಮಪ್ರಜ್ಞೆ ಶಾಶ್ವತವಾಗಿ ಉಳಿಯುವಂತೆ ಮಾಡಿದರು. ಅಂದಿನ ಪ್ರಾಕೃತ, ಸಂಸ್ಕೃತ, ಅಪಭ್ರಂಶ ಭಾಷಾ ಗ್ರಂಥಗಳೂ ಇಂದಿಗೂ ಉಳಿದು ಅವುಗಳೇ ಮೂಲ ಗ್ರಂಥಗಳಾಗಿ ಉತ್ತರದೇಶದ ಜನತೆಗೆ ಜ್ಞಾನ ಪ್ರಕಾಶನ್ನು ಬೀರಿದುವು. ತೀರ್ಥಂಕರರು ಉತ್ತರದೇಶದಲ್ಲಿ ಜನಿಸಿ ಧರ್ಮಪ್ರಚಾರ ಮಾಡಿದರೂ ದಕ್ಷಿಣದಲ್ಲಿನ ಅನೇಕ ಆಚಾರ್ಯರು ಗ್ರಂಥಗಳನ್ನು ರಚಿಸಿದ ಕಾರಣ ಉತ್ತರ ನಾಡಿನವರು ಎಂದಿಗೂ ದಕ್ಷಿಣದವರಿಗೆ ಋಣಿಯಾಗಿರಬೇಕಾಗಿದೆ ದಕ್ಷಿಣದಲ್ಲಿಯ ತಮಿಳು, ತೆಲುಗು, ಕನ್ನಡ ಕಾವ್ಯ ಮತ್ತು ಸಾಹಿತ್ಯವು ಧರ್ಮ ಪ್ರಸಾರದೊಂದಿಗೆ ಹರಿದು ಬಂದಿವೆ. ಅಷ್ಟೇಕೆ, ದಕ್ಷಿಣದ, ಉತ್ತರದ ಎಲ್ಲ ಭಾಷೆಗಳಲ್ಲಿನ ಮೊತ್ತ ಮೊದಲ ಸಾಹಿತ್ಯ ಕೃತಿ 'ಕಾವ್ಯಗಳೆಲ್ಲ ಜೈನಾಚಾರ್ಯ, ಜೈನ ಪಂಡಿತ, ಜೈನ ಕವಿ, ಜೈನ ಸಾಹಿತ್ಯಗಳಿಂದ ರಚಿತವಾಗಿವೆ ಎಂದರೆ ಜೈನ ಜಗತ್ತೇ ಹೆಮ್ಮೆಪಡುವಂತಹ ವಿಷಯವಾಗಿದೆ.

ಇಷ್ಟು ಹೆಮ್ಮೆಯೊಂದಿಗೆ ಕಲೆಗೂ ಕೀರ್ತಿಪ್ರಾಯವಾಗಿದೆ ಜೈನಧರ್ಮ. ಕಲೆಯ ಕಲಶಪ್ರಾಯವಾಗಿ ಉನ್ನತ ಶಿಖರದ ಮೇಲೆ ತನ್ನಾಶ್ರಿತರನ್ನು ಲೋಕದ ತುತ್ತತುದಿಯ ಶಾಶ್ವತ ಸುಖಸನ್ನಿಧಿಗೆ ಕರೆದೊಯ್ಯುವುದೋ ಎನ್ನುವಂತೆ ನಿಂತಿರುವ ಶ್ರವಣಬೆಳ್ಗೊಳದ ಗೊಮ್ಮಟ ಮೂರ್ತಿಯೊಂದೇ ಸಾಕು ಜೈನ ಕಲಾ ಪ್ರಾವೀಣ್ಯತೆ, ಪ್ರೋತ್ಸಾಹಗಳಿಗೆ ಸಾಕ್ಷಿ. ದಕ್ಷಿಣದಲ್ಲಿ ಇಂತಹ ಮೂರ್ತಿಗಳು ನಾಲ್ಕಾರು ಇವೆ.

ಹೀಗಿದ್ದು ತೀರ್ಥಂಕರರ ಅನುಯಾಯಿಗಳಾದ, ಜ್ಞಾನಮೂರ್ತಿಗಳಾದ ಆಚಾರ್ಯರ ಮೇಲ್ಪಂಕ್ತಿಯಲ್ಲಿ ಸಾಗಿ ಬಂದ ಸದ್ವಂಶದಲ್ಲಿ ಹುಟ್ಟಿದ ನಮ್ಮಲ್ಲಿ ಧರ್ಮ, ಸಾಹಿತ್ಯ, ಕಲೆಗಳಿಗೆ ಪ್ರೋತ್ಸಾಹಿಸಿದ ರಾಜ ಮಹಾರಾಜರ ರಕ್ಷಣೆಯಲ್ಲಿ ಪೋಷಿತವಾಗಿ ಧರ್ಮವನ್ನು ಉಳಿಸಿಕೊಂಡು ಬಂದ ಸುಶೀಲ ಶ್ರಾವಕೋತ್ತಮರ ಕುಲದಲ್ಲಿ ಹುಟ್ಟಿ ಬೆಳೆದು ಬಂದ ನಮ್ಮಲ್ಲಿ ಧಾರ್ಮಿಕ ಶ್ರದ್ಧೆ, ಧರ್ಮಪ್ರಜ್ಞೆ,



ಧರ್ಮಜಾಗೃತಿಗಳು ದಿನೇ ದಿನೇ ಕುಂದುತ್ತಿವೆ ಎಂಬುದನ್ನು ಕೇಳಿದಾಗ, ಕಣ್ಣಾರೆ ಕಂಡಾಗ, ಸ್ಮರಿಸಿದಾಗ ನಮ್ಮ ಮುಂದಿನ ಭವಿಷ್ಯದ ಪೀಳಿಗೆಯ ಸ್ಥಿತಿಗತಿಯ ಬಗ್ಗೆ ವಿಚಾರಮಾಡಿದರೆ, ಭಯವಾಗುತ್ತದೆ. ಧರ್ಮಕಾರ್ಯಗಳಿಗೆ ಅಡಚಣೆಯನ್ನು ತಂದೊಡ್ಡುವುದು, ಧರ್ಮಕಾರ್ಯಗಳಲ್ಲಿ ಉದಾಸೀನತೆ, ಧರ್ಮವೆಂಬುದೊಂದು ಗೊಡ್ಡು ತತ್ವ ಎಂಬ ಅಜ್ಞಾನ ಇಂದಿನ ಪೀಳಿಗೆಯಲ್ಲಿ ಮೂಡುತ್ತಿರುವುದು ನಿಜಕ್ಕೂ ಶೋಚನೀಯವಾದುದು. ನಮ್ಮ ಆಚಾರ ವಿಚಾರಗಳಲ್ಲಿ ಮುಂದುವರಿದವರೆನಿಸಿಕೊಂಡಿದ್ದ ನಮ್ಮಲ್ಲಿಯೇ ಧರ್ಮ ಪ್ರೇಮವು ಈ ರೀತಿ ಕಡಿಮೆಯಾಗುತ್ತಿರುವಾಗ ಮಕ್ಕಳ, ಮೊಮ್ಮಕ್ಕಳ ಭವಿಷ್ಯ ಹೇಗಾದೀತೆಂದು ಹಿರಿಯರಾದ ನಾವು ಯೋಚಿಸಬೇಕಾಗಿದೆ. ಹೊರವಾತಾವರಣದಲ್ಲಿ ಹಬ್ಬಿರುವ ಆಧುನಿಕತೆ, ರಂಗುರಂಗಿನ ಆಕರ್ಷಣೆ, ಬೆಡಗಿನ ಜೀವನ, ವೈಯಾರದ ವಿಲಾಸಗಳಿಗೆ ಧರ್ಮ ಪ್ರಜ್ಞೆ ಇಲ್ಲದೆ ಬೆಳೆದ ಮಕ್ಕಳು ಮಾರುಹೋಗುವುದರಲ್ಲಿ ಸಂದೇಹವೇ ಇಲ್ಲ. ಕಾಲ ಆಧುನಿಕವಾದರೂ ಧರ್ಮ ಹಳೆಯದೇ ಆಧುನಿಕ ಕಾಲವೆಂದು ಸೂರ್ಯನಲ್ಲಿ ಶಾಖ, ಬೆಂಕಿಯಲ್ಲಿ ಉಷ್ಣ, ನೀರಿನಲ್ಲಿ ತಂಪು, ಗಾಳಿಯಲ್ಲಿ ಬದಲಾವಣೆ ಜೀವಿಗಳಲ್ಲಿನ ಚೇತನ ಮುಂತಾದ ವಸ್ತುಸ್ಥಿತಿ ಏನೂ ಬದಲಾಗಿಲ್ಲ. ಮರಕ್ಕೆ ಹೊಸ ಚಿಗುರಿರಬಹುದು. ಆದರೆ ಅದು ನಿಂತಿರುವುದು ಹಳೆಯ ಬೇರಿನ ಬಲದಿಂದ. ಧರ್ಮವೂ ಹಾಗೆಯೇ. ಯುಕ್ತಿಗಳು ಹೊಸವಾದರೂ ಹಳೇ ತತ್ವದಿಂದ ಕೂಡಿಯೇ ಇರಬೇಕು. ಮಾಳಿಗೆ ಮನೆ ಹೋಗಿ ತಾರಸಿ ಮನೆ ಬಂದರೂ, ಎಣ್ಣೆ ದೀಪ ಹೋಗಿ ವಿದ್ಯುತ್ ದೀಪ ಬಂದರೂ, ಬಾವಿಯ ನೀರಿಗೆ ಬದಲಾಗಿ ನಲ್ಲಿಯಲ್ಲಿ ನೀರು ಬಂದರೂ, ರಾತ್ರಿಯ ಊಟ, ಶೋಧಿಸದೆ ನೀರಿನ ಉಪಯೋಗ ಈ ಕಾಲಕ್ಕೂ ಸಲ್ಲದಾಗಿದೆ. ಇಂದಿನ ವಿಜ್ಞಾನವು ಭೌತಿಕ ವಾದವಾಗಿದೆ. ಆದರೆ ವೀತರಾಗಿ ಹೇಳಿದ ಧರ್ಮವಿಜ್ಞಾನ ಆಧ್ಯಾತ್ಮಿಕವಾಗಿದೆ. ಈ ವಿಜ್ಞಾನವು ಸಂಪ್ರದಾಯದ ಧಾರ್ಮಿಕ ಪ್ರಜ್ಞೆಯ ಚೌಕಟ್ಟಿನಲ್ಲಿದ್ದು ಹೊರವಾತಾವರಣದ ವ್ಯವಹಾರದಲ್ಲಿ ಮಗ್ನನಾಗಿದ್ದರೂ ಅವನಿಗೆ ಧರ್ಮದ ಹಾನಿಯಾಗುವುದಿಲ್ಲ. ಹೇಗೆಂದರೆ ಎಣ್ಣೆಕೈ ಮಾಡಿಕೊಂಡು ಹಲಸಿನ ಹಣ್ಣು ಬಿಚ್ಚಿದಂತೆ. ಧರ್ಮವನ್ನು ಬಿಟ್ಟಲ್ಲಿ ಮಾನವನು ವಿವೇಕ ಶೂನ್ಯನಾಗಿ ಕಾರ್ಯ ಅಕಾರ್ಯಗಳ ಅರಿವಿಲ್ಲದೆ ಹಾಳಾಗಬೇಕಾಗುತ್ತದೆ. ಸರ್ವ ಜೀವಿಗಳಲ್ಲಿ ಮನುಷ್ಯನು ಶ್ರೇಷ್ಠನೆನಿಸಿರುವುದು ವಿವೇಕ ಮತ್ತು ಆಚಾರದಿಂದ. ವಿವೇಕದ ಸದುಪಯೋಗದಿಂದ ಸದಾಚಾರಿಯಾದರೆ ಆತ್ಮೋನ್ನತಿ, ಇಲ್ಲದಿದ್ದರೆ ಅಧೋಗತಿ. ಆದುದರಿಂದ ವಿವೇಕ ಮತ್ತು ಆಚಾರವೇ ಮನುಷ್ಯತ್ವವೆಂಬ ಒರೆಗಲ್ಲಿನ ಎರಡು ಮುಖಗಳು ಸುಪ್ತವಾಗಿದ್ದ ವಿವೇಕವನ್ನು ಜಾಗೃತಗೊಳಿಸುವುದಕ್ಕಾಗಿಯೇ

ಹಿಂದೆ ತೀರ್ಥೇಶರುಗಳು ತಮ್ಮ ಭೌತಿಕ ಸಂಪತ್ತನ್ನು ತೃಣೀಕರಿಸಿ, ತಮ್ಮ ಆತ್ಮಕಲ್ಯಾಣವನ್ನು ಸಾಧಿಸಿಕೊಂಡು ಆ ಮೂಲಕ ಲೋಕಕಲ್ಯಾಣಕರವಾದ ಆಚಾರ ವಿಚಾರಗಳ ಬೋಧೆಯನ್ನು ಮಾಡಿದರು.

ಹಿಂದೆ ನಮ್ಮ ತೀರ್ಥಂಕರರು ಹಾಗಿದ್ದರು, ನಮ್ಮ ಆಚಾರ್ಯರು ಹೀಗಿದ್ದರು, ರಾಜರಿದ್ದರು, ಶ್ರೀಮಂತ ಸಾಮಂತರಿದ್ದರು, ಧಾರ್ಮಿಕರಾಗಿದ್ದರು ಎಂದು ನಮ್ಮ ಗತ ವೈಭವವನ್ನು ನಮ್ಮ ಆತ್ಮತೃಪ್ತಿಗಾಗಿ ಹೇಳಿಕೊಳ್ಳುವುದು ಒಂದು ರೂಢಿಯಾಗಿದೆ. ಇದು ನಮಗೆ ಹೆಮ್ಮೆಯ ಮಾತಾಗಿದ್ದರೂ ಬರೇ ಗತವೈಭವದ ಸ್ಮರಣೆಯೊಂದು ಇದ್ದರೆ ಸಾಲದು. ಹಿಂದಿನ ಇತಿಹಾಸದ ಕನ್ನಡಿ ಯಲ್ಲಿ ಮುಂದಿನ ಕಲ್ಯಾಣದ ಹಾದಿಯನ್ನು ಕಾಣಬೇಕು. ಹಿಂದಿನವರ ಆದರ್ಶದ ಮೇಲ್ಪಂಕ್ತಿಯಲ್ಲಿ ಮುಂದಿನ ಪೀಳಿಗೆಯನ್ನು ತಿದ್ದಬೇಕು. ಪುರಾಣೇತಿಹಾಸಗಳು ನಮಗೆ ಮಾರ್ಗದರ್ಶನಗಳಾಗಿವೆ. ನಾವು ಅದರಿಂದ ಸ್ಫೂರ್ತಿಗೊಂಡು ಮುಂದೆ ಸಾಗಬೇಕು. ನಮ್ಮ ರಾಜರುಗಳನ್ನೂ, ಕಲೆ ಸಾಹಿತ್ಯಾದಿಗಳನ್ನೂ ಎಷ್ಟು ಹೊಗಳಿಕೊಂಡರೂ ನಮಗೆ ತೃಪ್ತಿಯಾಗುವುದಿಲ್ಲ. ಒಬ್ಬ ವಿದ್ವಾಂಸರು ಹೇಳಿದ್ದಾರೆ. "ಜೈನ ಜನತೆಯ ಪೂರ್ವೇತಿಹಾಸವು ಭಾರತದ ಯಾವುದೊಂದು ಸ್ಥಳವನ್ನು ಕೇಂದ್ರವಾಗಿಟ್ಟುಕೊಂಡು ಹತ್ತು ಮೈಲಿಗಳ ಪರಿಧಿಯುಳ್ಳ ಒಂದು ವೃತ್ತವನ್ನು ಎಳೆದರೆ, ಆ ವೃತ್ತದ ಎಲ್ಲೆಯೊಳಗೆ ಅನೇಕ ಪುರಾತನ ಜೈನ ಸ್ಮಾರಕಗಳು ಸಿಕ್ಕೇ ಸಿಕ್ಕುತ್ತವೆ." ಇದರಿಂದ ತಿಳಿಯುವುದೇನೆಂದರೆ ಜೈನಧರ್ಮವು ಭಾರತದಾದ್ಯಂತ ಪಸರಿಸಿದ್ದು ಜೈನರು ಬಹುಸಂಖ್ಯಾತರಾಗಿ ನೆಲೆಸಿದ್ದರು. ಧರ್ಮದ ಧ್ವಜ ಪತಾಕೆಗಳು ಎಲ್ಲೆಲ್ಲಿಯೂ ಹಾರಾಡುತ್ತಿದ್ದುವು ಎಂಬುದು ತಿಳಿಯುತ್ತದೆ. ಆದರೆ ಇದೆಲ್ಲ ಹಿಂದಿನ ವೈಭವದ ಮಾತಾಯಿತು. ಈಗ ನಾವೆಲ್ಲಿದ್ದೇವೆ? ನಮ್ಮ ಪ್ರಕೃತದ ಸ್ಥಿತಿ ಏನು? ಭವಿಷ್ಯದ ಪಾಡೇನು? ಮುಂದಿನ ಪೀಳಿಗೆಯ ಗತಿ ಏನು? ಎಂಬ ಅನೇಕ ಸಮಸ್ಯೆಗಳು ಇಂದಿನ ನಮ್ಮ ಹಿರಿಯರ ಮುಂದಿವೆ. ಇವುಗಳಿಗೆ ಪರಿಹಾರೋಪಾಯವನ್ನು ಇಂದಿನ ಹಿರಿಯ ಮುಖಂಡರು ಅಥವಾ ಗೃಹಸ್ಥರು ಅರಿಯದಿದ್ದರೆ, ಮಂದಿರಗಳು, ಮಠಗಳು, ವಿಲಾಸಿ ಗೃಹಗಳಾಗಬಹುದು. ಶ್ರಾವಕರ ಮನೆಗಳು ಕ್ಲಬ್‌ಗಳಾಗಬಹುದು. ಇಂದಿನ ನಮ್ಮ ಸಮಾಜದಲ್ಲಿ ಅಭಿಪ್ರಾಯಗಳು, ರೀತಿ-ನೀತಿಗಳು ದಿಕ್ಕುಪಾಲಾಗಿವೆ. ತ್ಯಾಗಿಗಳದ್ದೇ ಒಂದು ರೀತಿ, ಮಠಾಧಿಪತಿಗಳದ್ದೇ ಒಂದು ರೀತಿ, ಪಂಡಿತರದ್ದೇ ಒಂದು ರೀತಿ, ಶ್ರಾವಕರುಗಳದ್ದೇ ಒಂದು ರೀತಿ ಮನೋಭಾವಗಳಾಗಿಬಿಟ್ಟು ತಮ್ಮ ತಮ್ಮ ಕರ್ತವ್ಯಗಳಲ್ಲಿ ಲೋಪ ಮಾಡಿಕೊಂಡಿರುವುದರಿಂದಲೋ ಏನೋ ಇಂದಿನ ಪೀಳಿಗೆಯಲ್ಲಿ ಧರ್ಮದ ವಿಷಯದಲ್ಲಿ ಒಂದು ರೀತಿಯ ಆಲಸ್ಯ, ಉದಾಸೀನತೆ,



ಅಲಕ್ಷ್ಯ, ಅಸಡ್ಡೆ, ಅನಾಸಕ್ತಿಗಳುಂಟಾಗಿರಬಹುದೆಂದೆನಿಸುತ್ತದೆ. ಇದರಿಂದಾಗಿಯೇ ಅನೇಕ ಮಂದಿರಗಳಲ್ಲಿ ಪೂಜೆಯಿಲ್ಲ. ಅನೇಕ ಮಠಗಳಲ್ಲಿ ಗುರುಕುಲಗಳಿಲ್ಲ. ಅನೇಕ ಶ್ರಾವಕರಲ್ಲಿ ಕ್ರಿಯಾಚರಣೆ ಇಲ್ಲ. ಇದು ನಿಜಕ್ಕೂ ಶೋಚನೀಯವಾದುದು.

ಆದರೆ ಇಂದೂ ಕಾಲ ಮಿಂಚಿಲ್ಲ. ಎಚ್ಚರವಾಗಬೇಕು. ತ್ಯಾಗಿಗಳೂ, ಮಠಾಧಿಪತಿಗಳೂ, ಪಂಡಿತರೂ ಶ್ರಾವಕರುಗಳ ಸಮಾಗಮವಾಗಿ, ಸಂಘಟಿತರಾಗಿ ಪೂರ್ವಾಚಾರ್ಯರ ಪದ್ಧತಿಗಳನ್ನು ಆಚರಣೆಗೆ ಹೇಗೆ ತರಬಹುದೆಂಬ ಬಗ್ಗೆ ವಿಚಾರಗಳನ್ನು ಪ್ರಚಾರಮಾಡಿ ಶಿಥಿಲವಾದ ರೀತಿ-ನೀತಿಗಳನ್ನು ಉಳಿಸಲು ಇಂದೂ ಸಾಧ್ಯವಿದೆ. ಇಂದೂ ನಿಷ್ಠಾವಂತ ತ್ಯಾಗಿಗಳಿದ್ದಾರೆ, ಉದ್ದಾಮ ಪಂಡಿತರಿದ್ದಾರೆ. ಹುರುಪಿನ ಮಠಾಧಿಪತಿಗಳಿದ್ದಾರೆ, ಶ್ರೀಮಂತ ಶ್ರಾವಕರಿದ್ದಾರೆ. ಹೀಗಿರುವ ಕೆಲವರಾದರೂ ಒಂದೆಡೆಗೆ ಸೇರಿ, ಲೋಪವಾಗುತ್ತಿರುವ ಕರ್ತವ್ಯಗಳನ್ನು ತಿಳಿಸಿ ಇಂದಿನ ಪೀಳಿಗೆಯಲ್ಲಿ ಧರ್ಮಪ್ರಜ್ಞೆ ಮೂಡುವಂತೆ ಮಾಡಬಹುದು.

ಇಷ್ಟರಿಂದ ಮಾತ್ರಕ್ಕೆ ತನ್ನ ದುಡಿಮೆಯನ್ನಾಗಲೀ, ವ್ಯವಹಾರವನ್ನಾಗಲೀ, ಆಧುನೀಕತೆಯನ್ನಾಗಲೀ ಬಿಟ್ಟು ಬಿಡಬೇಕೆಂದಲ್ಲ. ದುಡಿಮೆ ನ್ಯಾಯ ಪೂರಿತವಾಗಿರಲಿ, ವ್ಯವಹಾರವು ನಿಶ್ಚಯದ ಹಿನ್ನೆಲೆಯಿಂದ ಕೂಡಿರಲಿ, ಆಧುನೀಕತೆಯು ತನ್ನ ಸಂಸ್ಕೃತಿಯನ್ನು ಹಾಳುಮಾಡದಂತಿದ್ದು ಮಾನವೀಯತೆಯನ್ನೂ ಮಾನ ಮರ್ಯಾದೆಯನ್ನೂ ಹಾಳುಮಾಡದಂತಿರಲಿ. ಈಗ ಕೆಲವರಿಗೆ ವಾರ ಪತ್ರಿಕೆ, ಮಾಸಪತ್ರಿಕೆಗಳನ್ನೂ ಕಾದಂಬರಿಗಳನ್ನೂ ಓದುವ ಅಭ್ಯಾಸವಿದೆ ಎನ್ನೋಣ. ಓದಲಿ, ಆದರೆ ಅವುಗಳೊಂದಿಗೆ ಧಾರ್ಮಿಕ ಕಥೆ, ಪುರಾಣ, ಸಿದ್ಧಾಂತ, ಧಾರ್ಮಿಕ ಪತ್ರಿಕೆಗಳೂ ಇವೆ. ಅವುಗಳನ್ನೂ ಓದಬೇಕು. ಲೌಕಿಕ ದೊಂದಿಗೆ ಧಾರ್ಮಿಕ ಛಾಯೆಯೂ ಇರಬೇಕು. ವ್ಯಾವಹಾರಿಕ ಶಿಕ್ಷಣದೊಂದಿಗೆ ಹಿರಿಯರು ತಮ್ಮ ಮಕ್ಕಳಿಗೆ ಧಾರ್ಮಿಕ ಶಿಕ್ಷಣವನ್ನೂ ಕೊಡಿಸಬೇಕು. ಇಡೀ ವರ್ಷವೆಲ್ಲ ಈ ಧಾರ್ಮಿಕ ಶಿಕ್ಷಣದ ವ್ಯವಸ್ಥೆ ಇಲ್ಲದಿದ್ದರೂ ವರ್ಷಕ್ಕೆ ಒಂದೆರಡು ತಿಂಗಳಾದರೂ, ಬೇಸಿಗೆಯ ರಜಾ ಕಾಲದಲ್ಲಿ ಧಾರ್ಮಿಕ ಶಿಕ್ಷಣ ಶಿಬಿರಗಳನ್ನು ತೆರೆದು ತಮ್ಮ ಮಕ್ಕಳು ಬಲವಂತವಾಗಿಯಾದರೂ ತಮ್ಮ ಸಂಸ್ಕೃತಿಯ, ಧಾರ್ಮಿಕ ರೀತಿ-ನೀತಿಯ, ನೇಮ-ನಿಯಮಗಳ, ತತ್ವ-ಇತಿಹಾಸಗಳ, ಪುರಾಣ-ಪುಣ್ಯಕಥೆಗಳ, ಪೂಜೆ-ಪುರಸ್ಕಾರಗಳ ಪರಿಚಯ ಮಾಡಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬೇಕು. ತನ್ನ ಜೀವಿತಕಾಲದಲ್ಲಿ ದೈನಂದಿನ ಜೀವನದಲ್ಲಿ ಸ್ವಲ್ಪ ಹೊತ್ತಾದರೂ ತನ್ನ ನೈಜ ಸುಖಕ್ಕಾಗಿ ಮೀಸಲಿಟ್ಟು ಧಾರ್ಮಿಕ ಕ್ರಿಯೆಗಳಲ್ಲಿ ಭಾಗಿಗಳಾಗಬೇಕು. ನಾವು ಮಾಡುವ ವ್ಯವಹಾರಕಾರ್ಯಗಳೆಲ್ಲ ದುಡಿಮೆಯೆಲ್ಲಾ ಗೇಣು ಹೊಟ್ಟೆಗಾಗಿ, ಮಾರು

ಬಟ್ಟೆಗಾಗಿ ಅಷ್ಟೇ. ಎಷ್ಟು ಹೋರಾಡಿ ಹಣಗಾಡಿದರೂ ಹೊಟ್ಟೆಯ ತೃಪ್ತಿಯೂ, ಬಟ್ಟೆಯ ಆಕಾಂಕ್ಷೆಯೂ ಪೂರ್ತಿ ಆಗಿಲ್ಲ. ಅಂದ ಮೇಲೆ ಇಷ್ಟಕ್ಕೆ ನಮಗೆ ಒದಗಿರುವ ಜನ್ಮ, ಪಡೆದಿರುವ ಚೇತನ, ಇರುವ ಜ್ಞಾನ, ಶಕ್ತಿ, ಸಂಪದಗಳನ್ನು ಕೇವಲ ಈ ಹೊಟ್ಟೆ ಬಟ್ಟೆಗಾಗಿ ಖರ್ಚು ಮಾಡುವುದಲ್ಲದೆ ಇವುಗಳ ಪೂರ್ತಿಗಾಗಿ ಪರದಾಡಿ ಹಿಂಸೆ, ಸುಳ್ಳು, ಮೋಸ, ಹೊಡೆದಾಟ, ಬಡಿದಾಟಗಳನ್ನು ಮಾಡ ಬೇಕಾಗಿದೆ. ಏನೇ ಮಾಡಿದರೂ ತೃಪ್ತಿಯಂತೂ ಇಲ್ಲವಾಗಿದೆ. ನಿನ್ನೆ ಉಪ್ಪರಿಗೆಯ ಮೇಲಿದ್ದವನು ಇಂದು ತಿಪ್ಪೆಯ ಮೇಲೂ, ನಿನ್ನೆ ಸುಖಿಯೆನಿಸಿದ್ದವನು ಇಂದು ದುಃಖಿಯಾದವನೂ, ನಿನ್ನೆ ನಗುತ್ತಲಿದ್ದವನು ಇಂದು ಗೋಳಾಡುತ್ತಿರುವವನೂ, ಯೌವನವಂ ತನು ಒಂದಲ್ಲ ಒಂದು ದಿನ ಮುದುಕನಾಗುವುದು ಖಂಡಿತ ಎಂಬದನ್ನು ಎಲ್ಲರೂ ಬಲ್ಲರು.

ಅರಸರ ವೈಭವ, ಸುರರ ವಿಮಾನ, ಧನ ಯೌವನ ಸಂಪದವೆಲ್ಲಾ !
ನಿರುತವು ನೆನೆದರೆ ಇಂದ್ರಿಯ ಭೋಗವು ಎಂದೂ ನಿಲ್ಲದು ಸ್ಥಿರವಲ್ಲಾ ।
ಮೆರೆಯುತ ಕಾಮನಬಿಲ್ಲಿನ ತೆರದೊಳು ನೋಡಲು ಮತ್ತಲ್ಲೇನಿಲ್ಲಾ ॥

ಎಂಬ ವಿಷಯ ಎಲ್ಲರಿಗೂ ಗೊತ್ತು. ಹೀಗಿದ್ದೂ ಐಹಿಕ ಭೋಗಾಕಾಂಕ್ಷೆ ಗಾಗಿ ಪರದಾಟ ತಪ್ಪಿಲ್ಲ. ಕಾರಣ ಧಾರ್ಮಿಕ ಪ್ರಜ್ಞೆಯಿಲ್ಲದ್ದು. ಆಧ್ಯಾತ್ಮವಾದೀ ಸಮ್ಯಗ್ ದೃಷ್ಟಿಯು ವ್ಯವಹಾರಚತುರನಾಗಿದ್ದು ಧಾರ್ಮಿಕ ಜೀವನವನ್ನು ನಡೆಸಿ ತನ್ನ ಜೀವನವನ್ನು ಆದರ್ಶಮಯವಾಗಿ ಇಟ್ಟುಕೊಳ್ಳುತ್ತಾನೆ. ಸುಖ ಬಂದಾಗ ಹಿಗ್ಗದೆ, ದುಃಖ ಒದಗಿದಾಗ ಕುಗ್ಗದೆ ಸಮತಾ ಭಾವನೆಯಿಂದ ಬಾಳುತ್ತಾನೆ. ಹಾಗಿದ್ದಾಗಲೇ ಶಾಂತಿ. ಸುಖ ಎಂಬುದು ಅವನಿಗೆ ಗೊತ್ತು. ಈ ಸುಖ-ದುಃಖ ಗಳಿಗೆ ಕಾರಣವಾದ ಕರ್ಮವನ್ನು ಎಂದೋ ನಾನೇ ಮಾಡಿದವನಾದುದರಿಂದ ಅದನ್ನು ಅನುಭವಿಸಿಯೇ ತೀರಬೇಕೆಂದು ತಿಳಿದು, ಮುಂದೆ ಇಂತಹ ದುಃಖವು ತನಗೆ ಉಂಟಾಗದಿರಲೆಂದು ಅದಕ್ಕೆ ಕಾರಣವಾದ ಕಾರ್ಯಗಳನ್ನು ಮಾಡದಂತೆ ಎಚ್ಚರಿಕೆಯಿಂದ ಬಾಳುತ್ತಾನೆ.

"ಈಗಲೇ ಏಕೆ ಚಿಂತೆ? ಮುಂದೆ ನೋಡಿಕೊಳ್ಳೋಣ. ಧರ್ಮ ಕರ್ಮ ಎಂದುಕೊಂಡು ನಡೆಸಲಿಕ್ಕೆ ಈಗ ಬಿಡುವೆಲ್ಲಿದೆ. ಮುಂದೆ ಬಿಡುವು ದೊರೆತಾಗ ನೋಡೋಣ. ನಾವು ಮುಪ್ಪಾದಾಗ, ರಿಟೈರ್ ಆದಾಗ ಬೇಕಾದಷ್ಟು ಬಿಡುವಿರುತ್ತದೆ. ಆಗ ದೇವರು, ಗುರು. ಶಾಸ್ತ್ರ ನೋಡೋಣ. ಈಗ ದುಡಿಮೆಯ ಕಾಲ" ಎಂದು ಮಾತನಾಡುವ ಜನರೂ ಇದ್ದಾರೆ. ಹೌದು, ಮುಂದೆ ಬಿಡುವು ದೊರೆಯುತ್ತದೆಂಬುದನ್ನು ಹೇಗೆ ನಿಶ್ಚಯಿಸಬಹುದು? ಇರುವಾಗ ಸ್ವಲ್ಪ ವೇಳೆ



ಬಿಡುವು ಮಾಡಿಕೊಂಡು ಧರ್ಮ ಜೀವನ ಅಭ್ಯಾಸ ಮಾಡದಿದ್ದರೆ ಮುಂದೆ ಕಣ್ಣು, ಕಿವಿ, ದೈಹಿಕ ಬಲ ಇದ್ದ ಹಾಗೇ ಇರುತ್ತವೆಂದು ಹೇಗೆ ಹೇಳುವುದು? ಮಾನವ ಬಾಳು 100 ವರ್ಷ ಆಯುಷ್ಯವಿದೆಂದರೂ ಮೊದಲೈದು ವರ್ಷ ಕೋತಿಯಂತೆ ಜಿಗಿದಾಡಿ, ಮತ್ತೆ ಹತ್ತು ವರ್ಷ ಗಿಳಿಪಾಠ ಕಲಿತು, ಆ ಮೇಲೈದು ವರ್ಷ ಜ್ಞಾನ ಪಡೆಯಲು ಪರದಾಡಿ, ನಂತರದ ಮೂವತ್ತು ವರ್ಷ ಗಾಣದೆತ್ತಿನಂತೆ ದುಡಿದು ನಂತರ ಇಪ್ಪತ್ತು ವರ್ಷ ಕಣ್ಣು ಕಾಣದೆ ಗೂಬೆಯಂತೆ ಕಳೆದು, ಮಿಕ್ಕ ಬಾಳನ್ನು ಜೀವದ ಶವದಂತೆ ಕಳೆದರೆ ತಾನೂ ನೂರು ವರ್ಷ ಬದುಕಿ ಏನು ಫಲ? ಇರಲಿ, ಇನ್ನೊಂದು ರೀತಿ ಎಂದರೆ :-

ಆಯುರ್ವರ್ಷಶತಂ ನೃಣಾಂ ಪರಿಮಿತಂ
ರಾತ್ರೌ ತದರ್ಧಂ ಗತಂ ।
ತಸ್ಯಾರ್ಧಸ್ಯ ಪರಸ್ಯ ಚಾರ್ಧಮಪರಂ
ಬಾಲತ್ವವೃದ್ಧತ್ವಯೋಃ ।
ಶೇಷಂ ವ್ಯಾಧಿವಿಯೋಗದುಃಖಸಹಿತಂ
ಸೇವಾದಿಭಿರ್ನೀಯತೇ ।
ಜೀವೇ ವಾರಿತರಂಗಚಂಚಲತರೇ
ಸೌಖ್ಯಂ ಕುತಃ ಪ್ರಾಣಿನಾಮ್ ॥

ಮಾನವನಿಗೆ 100 ವರ್ಷ ಆಯುಷ್ಯವಿದ್ದರೂ ಅದರಲ್ಲರ್ಧ ರಾತ್ರಿ ನಿದ್ರೆಯಲ್ಲಿ ಕಳೆಯುತ್ತದೆ. ಮಿಕ್ಕದ್ದು ಬಾಲ್ಯ, ಮುಪ್ಪು, ರೋಗ, ವಿಯೋಗ, ದುಃಖ, ಪರಸೇವೆ ಇವುಗಳಲ್ಲಿ ಕಳೆದಾಗ ಸಮುದ್ರದ ತೆರೆಮಾಲೆಗಳಿದ್ದಂತೆ ಜೀವಿತದಲ್ಲಿ ದುಃಖವೇ ದುಃಖವಿರುವಾಗ ಸುಖವೆಲ್ಲಿಯದು? ಹೀಗಿದ್ದೂ "ಮುಂದೆ ನೋಡೋಣ ಈಗೇನು" ಎಂಬ ಉದಾಸೀನ ಮಾಡಿದರೆ ಮುಂದಾದರೂ ಒಳ್ಳೆಯ ದಿನಗಳನ್ನು ಕಾಣುತ್ತೇವೆಂದು ಹೇಗೆ ಭರವಸೆ? ಇರಲಿ, ಮುಪ್ಪಿನಲ್ಲಾದರೂ, ಅಥವಾ ಸಾಯುವಾಗ ಒಮ್ಮೆಯಾದರೂ ಅರಹಂತ ಸಿದ್ಧ ಎಂದರಾಯಿತೆಂದು ಸುಮ್ಮನಿದ್ದರೆ, ಪ್ರಾಕ್ಟೀಸ್ ಮಾಡದೆ ರಂಗಮಂದಿರದಲ್ಲಿ ನಿಂತು ನಾಟಕವಾಡಲು ಸಾಧ್ಯವೇ? ಜ್ಞಾನ ರಂಗಮಂದಿರದಲ್ಲಿ ನಿಂತು ನಾಟಕವಾಡಲು ಸಾಧ್ಯವೇ? ಜ್ಞಾನ ಚೇತನ ದೈಹಿಕ ಬಲವಿದ್ದಾಗ ಧರ್ಮಾಚರಣೆಯ ಅಭ್ಯಾಸವಿಲ್ಲದೆ ಅಂತ್ಯ ಸಮಯದಲ್ಲಿ ಹೇಗೆ ಬಂದೀತು? ಆದುದರಿಂದ ಇರುವ ಸಮಯ, ಇರುವ ಚೇತನ, ಇರುವ ಅವಕಾಶದಲ್ಲಿಯೇ ಸ್ವಲ್ಪ ಹೊತ್ತಾದರೂ ಧರ್ಮದಲ್ಲಿ ಪ್ರವೃತ್ತನಾಗಲು ಪ್ರಯತ್ನಿಸಬೇಕು. ಹೀಗಾಗಲು ಹಿರಿಯರು ತಾವು ಸ್ವತಃ ಧರ್ಮಕಾರ್ಯಾಸಕ್ತರಾಗಿದ್ದು

ತಮ್ಮ ಮಕ್ಕಳನ್ನು ಈ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಬೇಕು. ಮಕ್ಕಳ ಭವಿಷ್ಯದ ಹಿರಿಯ ಜವಾಬ್ದಾರಿಯು ಇಂದು ಮಾತೆಯರ ಮೇಲೆ ಹೆಚ್ಚಾಗಿದೆ. "ಮೊದಲ ಪಾಠಶಾಲೆ ಮನೆ, ಮೊದಲ ಗುರು ಜನನಿ." ಎಂದ ಹಾಗೆ ತನ್ನ ಮಗನು ಉತ್ತಮನಾಗಿ ಮುಂದೆ ಆದರ್ಶ ಜೀವನವನ್ನು ಸಾಗಿಸಿ, ತಮಗೂ ತಮ್ಮ ವಂಶಕ್ಕೂ, ದೇಶಕ್ಕೂ ಕೀರ್ತಿ ತಂದು ತನ್ನ ಆತ್ಮಕಲ್ಯಾಣವನ್ನು ಮಾಡಿಕೊಳ್ಳುವಂತಾಗಬೇಕಾದರೆ, ಮಾತೆಯರು ತಮ್ಮ ಮಕ್ಕಳು ಒಳ್ಳೆಯ ಹಾದಿಯಲ್ಲಿ ಸಾಗಿ ಹೋಗುವಂತೆ ಎಚ್ಚರಿಕೆ ವಹಿಸಬೇಕು. ಹೀಗೆಂದ ಮಾತ್ರಕ್ಕೆ ತಂದೆಯರ ಜವಾಬ್ದಾರಿ ಏನಿಲ್ಲವೆಂದಲ್ಲ. ಅವರು ತಾವು ಆದರ್ಶ ಜೀವನ ನಡೆಸಿಕೊಂಡು ಸರಳ, ಸತ್ಯ, ಸಾತ್ವಿಕ ವ್ಯವಹಾರ ನಡೆಸುತ್ತ ಮಕ್ಕಳ ಪುರೋಭಿವೃದ್ಧಿಗೆ ಶ್ರಮಿಸಬೇಕು. ತಂದೆ ತಾಯಂದಿರ ಬಾಳು ಹಸನಾಗಿದ್ದರೆ ಅವರ ಪೀಳಿಗೆಯೂ ಆದರ್ಶವಾಗಿರಬಲ್ಲದು. ಮಕ್ಕಳು ಬೆಳೆಯುವ ವಾತಾವರಣ, ಅವರು ಸೇರುವ ಜೊತೆಗಾರರ ರೀತಿ-ನೀತಿ, ಅವರ ಆಟ-ಪಾಟ, ಅನ್ನ-ಪಾನಾದಿಗಳು ಒಳ್ಳೆಯವಿರುವಂತೆ ಮಾತಾ-ಪಿತೃಗಳು ಎಚ್ಚರಿಕೆ ವಹಿಸಿ, ತಮ್ಮ ಮಕ್ಕಳನ್ನು ತಿದ್ದುತ್ತ ಅವರು ಚಿಕ್ಕಂದಿನಲ್ಲಿಯೇ ಧಾರ್ಮಿಕ ವಾತಾವರಣದಲ್ಲಿ ಬೆಳೆಯುವಂತೆ ಅವಕಾಶವನ್ನು ಕಲ್ಪಿಸಬೇಕು. ಮೊದಲು ಮೊದಲು ಬಲವಂತವಾಗಿಯೇ ದೇವರ ದರ್ಶನ ಮಾಡುವುದನ್ನೂ, ಪೂಜೆ ಮಾಡುವುದನ್ನೂ, ಜಪ ಮಾಡುವುದನ್ನೂ, ಧರ್ಮಗ್ರಂಥಗಳನ್ನು ಓದುವುದನ್ನೂ ಕೇಳಿಸಿ, ತಮ್ಮ ಜೊತೆಯಲ್ಲಿಯೇ ಮಾಡಿಸಿಕೊಂಡು ಬರಬೇಕು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ? ಎಂಬಂತೆ ಎಳೆಯ ವಯಸ್ಸಿನಲ್ಲಿಯೇ ಮಕ್ಕಳ ರೀತಿನೀತಿಗಳನ್ನು ತಿದ್ದಬೇಕು. ಹೀಗಾಗದಿದ್ದಲ್ಲಿ ಮುಂದಿನ ಪೀಳಿಗೆಯ ಸ್ಥಿತಿ ಏನಾಗುವುದೆಂದು ಹೇಳಬೇಕೆ?

ಭ. ಮಹಾವೀರರ 2600 ನೇ ವರ್ಷದ ಜನ್ಮದಿನೋತ್ಸವ ಸಮಾರಂಭವು ಒಂದು ವರ್ಷಪೂರ್ತಿ ಬಹು ವೈಭವವಾಗಿ ವಿಶ್ವವ್ಯಾಪಿಯಾಗಿ ನಡೆಯುವುದಿದೆ. ಇದಕ್ಕೆ ಮುನ್ನವೇ ಎಲ್ಲರೂ ಎಚ್ಚೆತ್ತು ಸಂಘಟಿತರಾಗಿ ಧರ್ಮಪ್ರಭಾವನೆ ಮಾಡುವುದಕ್ಕೆ ಸಿದ್ಧರಾಗಬೇಕು. ನಾವೆಲ್ಲರೂ ಧರ್ಮಜಾಗೃತರಾಗೋಣ. ಜೈನಧರ್ಮದ ಘನತೆ, ಗೌರವವನ್ನು ಕಾಪಾಡೋಣ.

ಇದನ್ನು ಯಾರೂ ಟೀಕೆ ಎಂದು ಭಾವಿಸಬಾರದು. ಎಚ್ಚರಿಕೆ ಎಂದು ತಿಳಿಯಬೇಕು.



# 53. ಆತ್ಮಧರ್ಮ ದರ್ಪಣ

ಇತ್ತೀಚಿಗಂತೂ ಪ್ರಪಂಚವು ಭೌತಿಕ ಯುಗವಾಗಿ ಪರಿಣಮಿಸಿ ಜನತೆಯು ಜಡವಸ್ತುಗಳ ಬಾಹ್ಯಾಲಂಕಾರದ ಆಡಂಬರಕ್ಕೆ ಸಿಕ್ಕಿ ಅದರಿಂದ ದೊರೆಯುವ ಅಲ್ಪ ಸುಖವೇ ತನ್ನದೆಂಬ ನಂಬಿಕೆಯ ಸುಳಿಯಲ್ಲಿ ಸಿಕ್ಕಿದೆ. ಈ ಭೌತಿಕ ವಿಜ್ಞಾನದ, ದೇಹಪೋಷಣೆಯ ಮತ್ತು ಲೌಕಿಕ ವಿಷಯದ ಬಗ್ಗೆ ನಾವೆಲ್ಲ ಅಲ್ಪ ಸ್ವಲ್ಪವನ್ನಾದರೂ ತಿಳಿದಿದ್ದೇವೆ. ಮತ್ತಷ್ಟು ತಿಳಿಯಲು ಕಾತರರಾಗಿದ್ದೇವೆ. ಕೇವಲ ಪರಪದಾರ್ಥದ ಕಡೆಗೆ ಗಮನವುಳ್ಳವರಾಗಿದ್ದೇವೆ. ನಮ್ಮಲ್ಲಿ ಹೆಚ್ಚು ಮಂದಿ ಲೌಕಿಕ ಬಾಹ್ಯ ಸಂಪತ್ತೇ ತಾನು, ತನ್ನದು ಎಂದು ಅಷ್ಟಮದಗಳ ಅಮಲಿನಲ್ಲಿ ತೊಳಲಾಡುತ್ತಿದ್ದೇವೆ. ಇವೆಲ್ಲ ತಾನು ಅಥವಾ ತನ್ನದಾಗಿದ್ದರೆ, ಹುಟ್ಟುವಾಗ ಜೊತೆಯಲ್ಲಿ ತಂದು ಸಾಯುವಾಗ ತೆಗೆದುಕೊಂಡು ಹೋಗಬೇಕಿತ್ತು. ತನ್ನವೆಂದು ನಂಬಿದ ಎಲ್ಲವನ್ನೂ ಬಿಟ್ಟು ಸಾಯುವ ಸ್ಥಿತಿ ಬರುವುದೆಂದು ಸರ್ವರಿಗೂ ಗೊತ್ತು. ಕೊನೆಗೆ 'ಸತ್ತುಹೋದ', 'ಸತ್ತುಹೋಯಿತು' ಎಂಬ ಗೋಳಿನ ಕೂಗು ಹೊರಡುತ್ತದೆ. ಆದುದರಿಂದ ಈ ವಿಚಾರದ ಕಡೆಗೆ ನಾವೆಲ್ಲ ಸ್ವಲ್ಪ ಗಮನವನ್ನು ಹರಿಸಿದರೆ ತಾನಾರು, ತನ್ನದಾವುದು ಎಂಬುದು ಗೊತ್ತಾಗುತ್ತದೆ.

ಶರೀರ ಜಡವಾದುದು ಎಂಬುದು ಆ 'ಸತ್ತು' ಹೋದಾಗ ಗೊತ್ತಾಗುತ್ತದೆ. ಶರೀರದೊಂದಿಗೆ ಸರ್ವಾಂಗ ಸಂಪೂರ್ಣವಾಗಿ ತುಂಬಿರುವ ಚೇತನ ಶಕ್ತಿಯೇ ಜೀವದ್ರವ್ಯ. ಇದರ ಗುಣ ನೋಡುವಿಕೆ ಮತ್ತು ತಿಳಿಯುವಿಕೆ ಮುಂತಾದುವು. ಜಡವನ್ನು ಜ್ಞಾನದಿಂದ ತಿಳಿಯಬಹುದು. ಆ ತಿಳಿಯುವ ಚೇತನವೇ ಚಿತ್ ಅಥವಾ ಆತ್ಮ. ಇದೇ ತಾನು ಮತ್ತು ತನ್ನದು. ಶರೀರಾದಿ ಪರಪದಾರ್ಥವೇ ಬೇರೆ, ಆತ್ಮ ಚೈತನ್ಯವೇ ಬೇರೆ.

ಒಬ್ಬನು ಯಾವುದೋ ವಾಹನ ಅಪಘಾತದಿಂದ ಕೈಯನ್ನೋ ಅಥವಾ ಕಾಲನ್ನೋ ಮುರಿದುಕೊಳ್ಳುತ್ತಾನೆ ಆಸ್ಪತ್ರೆಯಲ್ಲಿ ಆ ಭಾಗವನ್ನು ಪೂರ್ಣ ತೆಗೆದು ಹಾಕುತ್ತಾರೆ. ಆದರೂ ಆತ ಬದುಕುತ್ತಾನೆ. ತೆಗೆದುಹಾಕಿದ ಭಾಗಗಳು ಶರೀರದ ಅಂಗಗಳೇ ಹೊರತು ಚೈತನ್ಯ, ಚಿತ್ ಶಕ್ತಿಯಲ್ಲ ಇದರಿಂದ ಆತ್ಮನೇ ಬೇರೆ, ಶರೀರವೇ ಬೇರೆ ಎಂದು ಗೊತ್ತಾಗುತ್ತದೆ. ಹೆಸರುಕಾಳು ಮೇಲಿನ ಸಿಪ್ಪೆ ಮತ್ತು ಒಳಗಿನ ಬೇಳೆಗಳು ಒಣಗಿದ್ದಾಗ ಒಂದೇ ಎಂದು ಕಂಡರೂ ನೆನೆದಾಗ ಹಿಸುಕಿದರೆ

ಸಿಪ್ಪೆಯೇ ಬೇರೆ. ಬೇಳೆಯೇ ಬೇರೆ ಎಂದು ಹೇಗೆ ಗೊತ್ತಾಗುತ್ತದೆಯೋ, ಸಾವು ಹುಟ್ಟುಗಳಿಂದ ಪ್ರತ್ಯಕ್ಷವಾಗಿಯೇ ಆತ್ಮನೇ ಬೇರೆ, ಶರೀರವೇ ಬೇರೆ ಎಂದೂ ಆತ್ಮ ಚೈತನ್ಯ, ಶರೀರ ಜಡ ಎಂಬುದೂ ಗೊತ್ತಾಗುತ್ತದೆ. ಕಾರಣಾಂತರದಿಂದ ಈ ಜಡ ಚೇತನಗಳ ಸಂಯೋಗ ವಿಯೋಗಗಳು ನಡೆಯುತ್ತವೆ. ಸಂಯೋಗದಿಂದ ಹಿಡಿದು ವಿಯೋಗದವರೆಗಿನ ಕಾಲಾವಕಾಶದಲ್ಲಿ ಅನುಭವಿಸುವ ಸುಖ-ದುಃಖಕ್ಕೆ ಕರ್ಮವೇ ಕಾರಣ.

ಈ ಆತ್ಮನು ಶರೀರಸ್ಥನಾದಾಗ ದೇಶ, ಕಾಲ, ಸ್ಥಿತಿ, ಯೋಗಗಳಿಗನುಸಾರ ವಾಗಿ, ಸನ್ನಿವೇಶದ ಪ್ರಭಾವದಿಂದ, ಶುಭ, ಅಶುಭ ಭಾವನೆಯಿಂದ, ಶುಭಾಶುಭ ಕಾರ್ಯಗಳನ್ನು ಮಾಡುತ್ತ ಹಿಂದೆ ಮಾಡಿದುವುಗಳ ಫಲವನ್ನು ಅನುಭವಿಸುತ್ತಾನೆ. ಹಾಗೆಯೇ ಮುಂದೆ ಅನುಭವಿಸಬೇಕಾದ ಕರ್ಮಗಳನ್ನು ತನ್ನೊಂದಿಗೆ ಲೇಪಿಸಿಕೊಂಡು ಅವಧಿಯು ಮುಗಿದ ತಕ್ಷಣ ಪರಿಣಾಮಕ್ಕೆ ತಕ್ಕಂತಹ ಮುಂದಿನ ದೇಹವನ್ನು ನೋಡಿಕೊಂಡು ಈ ದೇಹವನ್ನು ಬಿಡುತ್ತಾನೆ. ಹೀಗೆ ಜನನ ಮರಣಾದಿಗಳು ದೇವ, ಮನುಷ್ಯ, ತಿರ್ಯಂಚ, ನಾರಕವೆಂಬ ಚತುರ್ಗತಿಗಳಲ್ಲಿಯೂ ಆಗುತ್ತವೆ. ಆತ್ಮನು ಗತಿಚಕ್ರದಲ್ಲಿ ಸಿಲುಕಿ, ಅವುಗಳಿಂದ ಬಿಡುಗಡೆಯ ಮಾರ್ಗವನ್ನು ಕಾಣದೆ ಪರಿತಪಿಸುತ್ತಿದ್ದಾನೆ. ಆ ಬಿಡುಗಡೆಯ ಮಾರ್ಗವೇ ನಿಜವಾಗಿ ಆತ್ಮನಿಗೆ ಬೇಕಾದುದು. ಅದೇ ಆತ್ಮನ ನಿಜವಾದ ಗುರಿ. ಅದೇ ಮೋಕ್ಷ. ಆ ಮೋಕ್ಷದಿಂದ ನಿಜವಾದ ಮತ್ತು ನಿರಂತರವಾದ ಸುಖವು ಆತ್ಮನಿಗೆ ದೊರೆಯುವುದು. ಅದೇ ಸಕಲಾತ್ಮರುಗಳ ಶಾಶ್ವತವಾದ ಆಸ್ತಿ. ಆ ಆಸ್ತಿಯನ್ನು ಪಡೆಯಲು ಆ ಮಾರ್ಗದಲ್ಲಿ ನಡೆಯಬೇಕಲ್ಲವೇ? ಆ ಹಾದಿಯನ್ನು ಹಿಡಿಯುವ ಮೊದಲು ಆತ್ಮನ ಅರಿವಾಗಬೇಕು. ಆತ್ಮಜ್ಞಾನವಿಲ್ಲದೆ ಮೋಕ್ಷ ಮಾರ್ಗದಲ್ಲಿ ಚಲಿಸುವುದಾದರೂ ಹೇಗೆ? ಭೌತಜ್ಞಾನದಂತೆ ಆತ್ಮ ವಿಜ್ಞಾನವೂ ಇದೆ. ಇದಕ್ಕೆ ಶರೀರವೇ ಪ್ರಯೋಗಶಾಲೆ. ತಪಸ್ಸೇ ಪ್ರಯೋಗ. ದೇವ, ಗುರು, ಶಾಸ್ತ್ರಗಳೇ ಮಾರ್ಗದರ್ಶಕರು. ನಿಜವಾದ ನಂಬಿಕೆ, ಜ್ಞಾನ, ಚಾರಿತ್ರಗಳೇ ನಿಜವಾದ ಸಾಧನಮಾರ್ಗ. ಈ ಮೂಲಕ ಮುಂದುವರಿದು ಸಾಧಿಸಿದ ಫಲವೇ ಮೋಕ್ಷ. ಈ ಪದವಿಗೆ ಪಾತ್ರವಾದ ಆತ್ಮನ ಪರಿಚಯ ಎಲ್ಲರಿಗೂ ಬೇಕಾಗಿದೆ.

ಆತ್ಮನು ಅಖಂಡವಾದ ಮತ್ತು ಅಮರವಾದ ಒಂದೇ ದ್ರವ್ಯ. ತನ್ನ ಮಟ್ಟಿಗೆ ಪ್ರತ್ಯೇಕವಾಗಿಯೇ ಇರುವನು. ಜಗತ್ತು ಅನಂತ ಆತ್ಮರುಗಳಿಂದ ತುಂಬಿದೆ. ಇವು ಪ್ರತ್ಯೇಕ ಪ್ರತ್ಯೇಕವಾಗಿಯೇ ದೇಹಧಾರಣೆ ಮಾಡಿ ತಮ್ಮ ತಮ್ಮ ಕರ್ಮಾನುಸಾರವಾಗಿ ಫಲವನ್ನು ಅನುಭವಿಸುತ್ತವೆ. ಆತ್ಮನು ಸ್ವಭಾವದಿಂದ ಶುದ್ಧನೂ ವಿಭಾವದಿಂದ



ಅಶುದ್ಧನೂ ಆಗಿದ್ದಾನೆ. ಹತ್ತಿಯು ಸ್ವಭಾವದಿಂದ ಬಿಳುಪಾಗಿದೆ. ಬಣ್ಣಗಳ ಸಂಯೋಗದಿಂದ ಬೇರೆ ಬೇರೆ ಬಣ್ಣವಾಗಿ ಕಾಣುತ್ತದೆ. ಹೀಗೆ ಆತ್ಮನು ಅಶುಭ ಪರಿಣಾಮದಿಂಥ ಹೆಚ್ಚು ದುಃಖಕ್ಕೀಡಾಗಿಯೂ, ಶುಭ ಪರಿಣಾಮದಿಂದ ಸುಖಾನುಭವಿಯೂ ಆಗಿದ್ದಾನೆ. ಭಾವನೆಗಳಿಗೆ ಅನುಸಾರವಾಗಿ ಆತ್ಮನನ್ನು ಮೂರು ಅವಸ್ಥೆಗಳಲ್ಲಿ ವಿಂಗಡಿಸಬಹುದು. ಅವುಗಳೆಂದರೆ - 1. ಬಹಿರಾತ್ಮ 2. ಅಂತರಾತ್ಮ 3. ಪರಮಾತ್ಮ.

**ಬಹಿರಾತ್ಮ** – ಜಘನ್ಯ ಶ್ರೇಣಿಯ ಕಲುಷಿತವಾದ ಅವಸ್ಥೆಯ ಆತ್ಮನೇ ಬಹಿರಾತ್ಮ. ಯಾವ ಜೀವವು ಪ್ರಾಪಂಚಿಕ ಭೋಗವಿಲಾಸಗಳಲ್ಲಿ ತನ್ನ ನಿಜತ್ವವನ್ನೇ ಮರೆತು, ಸತ್ಯಾಸತ್ಯದ ಅರಿವಿಲ್ಲದೆ ಶರೀರವೇ ತಾನೆಂದು ತಿಳಿದು, ಬಾಹ್ಯ ವಸ್ತುಗಳ ಬಯಲಾಡಂಬರಕ್ಕೆ ಮರುಳಾಗಿದೆಯೋ, ಮತ್ತೆ ಭವಸಾಗರದಲ್ಲಿ ಬಳಲುವುದಕ್ಕೆ ಬೇಕಾದ ಕಾರ್ಯಗಳನ್ನೇ ಮಾಡುತ್ತ ತನ್ನ ಸ್ವಂತ ಸ್ಥಿತಿಯಿಂದ ಬಹುರ್ಮುಖಿ ವಾಗಿದೆಯೋ ಅಂತಹ ಚೇತನಾವಸ್ಥೆಗೆ ಬಹಿರಾತ್ಮನೆಂದು ಹೆಸರು. ಈ ಆತ್ಮನು ಯಾವಾಗಲೂ ತೀವ್ರ ಸಂಕ್ಲೇಶ ಪರಿಣಾಮದಲ್ಲಿಯೇ ತೊಡಗಿರುತ್ತಾನೆ. ಪಂಚೇಂದ್ರಿಯ ವಿಷಯ ಸುಖಭೋಗದಲ್ಲಿ ಆಸಕ್ತನಾಗಿರುತ್ತಾನೆ. ಇವನು ಇಹ-ಪರಗಳ ಮತ್ತು ಪಾಪ-ಪುಣ್ಯಗಳ ಪರಿವೆ ಇಲ್ಲದೆ ದುರ್ಗತಿಗೆ ಕಾರಣವಾದ ಗತಿಯನ್ನು ಸಂಪಾದಿಸುತ್ತಾನೆ. ಈ ದರ್ಜೆಯು ಆತ್ಮನಿಗೆ ಅಂಟಿದ ಕರ್ಮಾಣು ಗಳೆಂದರೆ ಎಣ್ಣೆಯ ಗಡಿಗೆಯ ಮೇಲೆ ತಾಗಿದ ಧೂಳಿನಂತೆ ಅಂಟಿಕೊಳ್ಳುತ್ತವೆ. ಈ ಬಹಿರಾತ್ಮನು ಪೂರ್ವಾರ್ಜಿತ ಕರ್ಮಗಳ ಜೊತೆಗೆ ನವೀನ ಕರ್ಮಗಳನ್ನು ಬಂಧಿಸಿಕೊಳ್ಳುತ್ತಾನೆ.ಬಹಿರಾತ್ಮನು ಮಿಥ್ಯಾದೃಷ್ಟಿಯಾಗಿರುತ್ತಾನೆ.

ಸಾತ್ವಿಕತೆ ಎಂಬುದೇ ಈತನಲ್ಲಿರುವುದಿಲ್ಲ. ಅಂತಹ ಸಾತ್ವಿಕರನ್ನು ಕಂಡರೆ ಇವನು ದ್ವೇಷಿಸುತ್ತಾನೆ. ಮಾನವ ಗತಿಯು ತನ್ನ ನಿಜತ್ವವನ್ನು ಅರಿತು, ಪವಿತ್ರತೆಯನ್ನು ಹೊಂದಲು ದೊರೆತ್ತಿರುವ ಒಂದು ಅವಕಾಶ. ಇದನ್ನು ಈ ಶ್ರೇಣಿಯ ಆತ್ಮನು ದುರುಪಯೋಗ ಮಾಡಿಕೊಂಡು ದುರ್ಗತಿಗೆ ಭಾಜನನಾಗಿ ಅನಂತ ಕಾಲದವರೆಗೂ ದುಃಖಕೂಪದಲ್ಲಿ ನರಳುತ್ತಾನೆ. ಭವಸಾಗರದಿಂದ ದಾಂಟಿಸುವ ಉಪಾಯದ ಉಪದೇಶ ಒದಗುವ ಸನ್ನಿವೇಶವಿದ್ದರೂ ಅದನ್ನು ವಿರೋಧಿಸಿ ಧಕ್ಕೆಯನ್ನು ತಂದುಕೊಳ್ಳುತ್ತಾನೆ. ಈ ಬಹಿರಾತ್ಮನಿಗೆ ವಸ್ತುವಿನ ಯಥಾರ್ಥ ಸ್ವರೂಪ ತಿಳಿಯದು. ಹಾಲು ಪಿತ್ತ ರೋಗಿಗೆ ಹಳದಿ ಬಣ್ಣವಾಗಿ ಕಾಣುವಂತೆ ಆಗುವುದು. ಇದು ಆತ್ಮನ ನೈಜ ಸ್ವಭಾವವಲ್ಲ, ವಿಭಾವವು. ಈ ಜಘನ್ಯ ದರ್ಜೆಯ ಆತ್ಮನು ಕೊಲೆ, ಹುಸಿ, ಕಳವು, ಪರದಾರ ಮತ್ತು ಅತಿಕಾಂಕ್ಷೆ ಎಂಬ ಮಹಾ ಪಾಪಕಾರ್ಯದಲ್ಲಿ

ತೊಡಗಿರುತ್ತಾನೆ. ಇದರಿಂದ ಅನಂತಕಾಲದವರೆಗೆ ಭವಚಕ್ರಕ್ಕೆ ಸಿಕ್ಕಿ ಪರಿಭ್ರಮಿಸುತ್ತಿರ ಬೇಕಾಗುವುದು. ಇದರಿಂದುಂಟಾಗುವ ವೇದನೆಯು ಅಸಹನೀಯ. ಸಂಸಾರದಲ್ಲಿ ದೊರೆಯುವ ಅಲ್ಪ ಸುಖವೇ ತನ್ನದೆಂದು ಭೋಗಿಸಿ, ಕಡೆಗೆ ನಿರಂತರ ದುಃಖಕ್ಕೆ ಭಾಗಿಯಾಗುತ್ತಾನೆ. ಈತನಿಗೆ ಧರ್ಮದ, ಪಾಪ ಪುಣ್ಯದ, ಒಳ್ಳೆಯ ಕೆಟ್ಟ ವಿಷಯ ಗಳು ತಿಳಿಯುವುದಿಲ್ಲ.

ಒಮ್ಮೆ ಒಬ್ಬ ಕುದುರೆಸವಾರಿ ಸೈನಿಕನು ಕಾರಣಾಂತರದಿಂದ ಒಂದು ಕಾಡಿನಲ್ಲಿ ಹೋಗುತ್ತಿದ್ದನು. ಮಾರ್ಗದ ಮಧ್ಯೆ ಒಂದು ಎತ್ತರವಾದ ಮರದಲ್ಲಿ ಜೇನು ಗೂಡು ಇತ್ತು. ಅದನ್ನು ಈ ಸೈನಿಕನು ತನ್ನ ಸೊಂಟದಲ್ಲಿ ಇದ್ದ ಕತ್ತಿಯ ತುದಿಯಿಂದ ತಿವಿದನು. ಜೇನುತುಪ್ಪವು ಕತ್ತಿಯ ತುದಿಗೆ ಅಂಟಿ. ಕತ್ತಿಯ ಹರಿತವಾದ ಭಾಗದ ಕಡೆ ಹರಿಯಲಾರಂಭಿಸಿತು. ಕೂಡಲೇ ಆತ ಹರಿಯುವ ಜೇನನ್ನು ತನ್ನ ನಾಲಗೆಯಿಂದ ನೆಕ್ಕಿದನು ರುಚಿಯನ್ನು ಚಪ್ಪರಿಸಿದ ಮರುಕ್ಷಣವೇ ರಕ್ತ ತೊಟ್ಟಿಕ್ಕಲಾರಂಭಿಸಿತು. ನಾಲಗೆಯನ್ನು ಹರಿತವಾದ ಕತ್ತಿಯ ಅಲಗು ಕತ್ತರಿಸಿತ್ತು. ನೋವವನ್ನು ಸಹಿಸಲಾರದೆ ಸೈನಿಕನು ಪರದಾಡಿದ. ಅಷ್ಟೇ ನೋವು ಸಾಕಾಗಿತ್ತು. ಮುಂದೆ ಹೋಗಬಹುದಾಗಿತ್ತು. ಜೇನಿನ ಮೇಲೆ ಕುಪಿತನಾಗಿ ಕಲ್ಲಿನಿಂದ ಜೇನು ತಟ್ಟಿಗೆ ಎಸೆದನು. ಅದರಲ್ಲಿನ ಜೇನು ಹುಳುಗಳು ಹಾರಿ ಬಂದು ಸೈನಿಕನನ್ನು ಮುತ್ತಿದುವು ಎಲ್ಲಿ ಓಡಿದರೂ ಬಿಡಲಿಲ್ಲ. ಕಚ್ಚಿ ಕಾಡಿದುವು. ಅವನ ಸ್ಥಿತಿಯು ಅಸಹನೀಯವಾಯಿತು. ಕುದುರೆಯೊಂದು ಕಡೆ, ಇವನೊಂದು ಕಡೆಯಾದನು. ಹೀಗಿದೆ ಸಾಂಸಾರಿಕ ಅಲ್ಪ ಸುಖದ ಸವಿ. ಇದೇ ಬಹಿರಾತ್ಮನ ಸ್ಥಿತಿ. ಈತ ಅಜ್ಞಾನಿ, ಹಟದಸ್ವಭಾವೀ, ಅವಿಚಾರಿಯಾಗಿರುತ್ತಾನೆ.

**ಅಂತರಾತ್ಮ** – ಮಧ್ಯಮ, ಉತ್ತಮ ಶ್ರೇಣಿಯ ವಿಕಸಿತ ಆತ್ಮನ ಅವಸ್ಥೆಯೇ ಅಂತರಾತ್ಮ. ಯಾವ ಆತ್ಮವು ಕರ್ಮದ ಉಪಶಮನದಿಂದ ಭೌತಿಕ ಭೋಗಗಳಲ್ಲಿ ಅನಾಸಕ್ತವಾಗಿದ್ದು ಶರೀರಾದಿಗಳ ಮಮಕಾರವನ್ನು ಬಿಟ್ಟು ಸತ್ಯಾ ಸತ್ಯದ ಭೇದಭಾವದಿಂದ ತನ್ನ ನೈಜ ಸ್ವರೂಪದ ಅರಿವಿನ ಕಡೆ ತಿರುಗಿ, ಬಾಹ್ಯಾಡಂಬರದ ಅವಾಂತರದಿಂದ ವಿಮುಖವಾಗಿ ಸ್ವಸ್ವರೂಪದ ಕಡೆಗೆ ಅಂತರ್ಮುಖವಾಗುವುದೋ ಅದಕ್ಕೆ ಅಂತರಾತ್ಮ ಎಂದು ಹೆಸರು. ಅಂತರಾತ್ಮನ ದೃಷ್ಟಿಯು ನೈಜವಾಗಿರುತ್ತದೆ. ಅವನು ಯಥಾರ್ಥ ದೇವ, ಗುರು, ಶಾಸ್ತ್ರಗಳನ್ನು ನಂಬುತ್ತಾನೆ. ಸತ್ಯ, ಅಹಿಂಸೆ ಗಳನ್ನು ಪಾಲಿಸುತ್ತಾನೆ. ದೇಶ, ಕಾಲ, ಸ್ಥಿತಿಯ ಸಂಯೋಗದಿಂದ ಯಾವುದೋ ಒಂದು ಜನ್ಮದಲ್ಲಿ ಜೀವನಿಗೆ ಭೌತಿಕ ಸುಖದ ಕಡೆಗೆ ಅರುಚಿ ಉಂಟಾಗಿ, ಸತ್ಯಾಸತ್ಯತೆಯ, ಶುದ್ಧಾಶುದ್ಧದ, ಪಾಪ-ಪುಣ್ಯಗಳ, ಧರ್ಮಾಧರ್ಮಗಳ, ಜಡ-ಚೇತನಗಳ,



ಭೇದವಿಜ್ಞಾನದ ಅರಿವು ಉಂಟಾಗುತ್ತದೆ. ಈ ವೇಳೆಗೆ ಕರ್ಮದ ಉಪಶಮವಾಗಿ ಸದುಪದೇಶದ ಆಶ್ರಯ ದೊರೆಯುತ್ತದೆ. ಆಗ ಶರೀರವೇ ಬೇರೆ, ಆತ್ಮನೇ ಬೇರೆ, ಬಾಹ್ಯಾಡಂಬರದ ಅವಾಂತರವೇ ಬೇರೆ ಎಂಬುದು ತಿಳಿಯುತ್ತದೆ. ಇಲ್ಲಿಂದ ಮುಂದೆ ಆಧ್ಯಾತ್ಮಿಕ ಜೀವನದ ಆರಂಭವಾಗುತ್ತದೆ; ಆತ್ಮಜ್ಞಾನ ವಿಕಾಸಗೊಳ್ಳುತ್ತದೆ. ಕ್ರಮ ಕ್ರಮವಾಗಿ ದರ್ಶನ, ಚಾರಿತ್ರ ಮೋಹನೀಯಾದಿ ಕರ್ಮಗಳ ಆವರಣವು ಜಾರುತ್ತ ಬರುವುದು. ಅಂತರಾತ್ಮನು ಇಂದ್ರಿಯಾದಿಗಳ. ಇಚ್ಛೆಯನ್ನು ಜಯಿಸುತ್ತ ಒಂದು, ಮುಕ್ತಿಪಥದಲ್ಲಿ ಮುಂದೆ ಸಾಗುತ್ತಾನೆ. ಸಮ್ಯಗ್‌ದೃಷ್ಟಿ ಶ್ರಾವಕರು, ಸಾಧುಗಳೆಲ್ಲರೂ ಅಂತರಾತ್ಮನ ಪದವಿಗೆ ಪ್ರಾಪ್ತರು. ಇಲ್ಲಿ ಅವರ ಆಚರಣೆಯು ಸಾತ್ವಿಕವೂ. ರಾಗ-ದ್ವೇಷರಹಿತವೂ, ಸ್ವಾರ್ಥರಹಿತವೂ ಆಗಿರುತ್ತದೆ. ಬಾಹ್ಯದಲ್ಲಿ ಉಂಟಾಗುವ ಸುಖ-ದುಃಖಾದಿಗಳು ಪೂರ್ವಾರ್ಜಿತವೆಂದು ಸಹನೆಯಿಂದ ಸಹಿಸಿ, ನಿಜಾತ್ಮನ ಅರಿವಿನ ಕಡೆ ಒಲಿಯುತ್ತಾನೆ ಈ ಅಂತರಾತ್ಮ.


**ಪರಮಾತ್ಮ** – ಸರ್ವೋತ್ತಮ ಶ್ರೇಣಿಯ, ಪವಿತ್ರವಾದ, ಆಧ್ಯಾತ್ಮಿಕ ವಿಕಾಸದ ಸರ್ವೋಚ್ಚ ಮಟ್ಟವನ್ನು ತಲುಪಿದ ಆತ್ಮನ ಅವಸ್ಥೆಯೇ ಪರಮಾತ್ಮಾವಸ್ಥೆ. ಯಾವ ಆತ್ಮನು ಅಂತರಾತ್ಮದಲ್ಲಿ ಲೀನನಾಗಿ, ಸುಜ್ಞಾನ ದರ್ಶನ ಚಾರಿತ್ರಗಳಿಂದ ತಪಸ್ಸಾಧನೆ ಮಾಡಿ, ಕರ್ಮ ಶತ್ರುಗಳನ್ನು ಗೆದ್ದು, ರಾಗ-ದ್ವೇಷಾದಿ ಸಕಲ ದೋಷ ರಹಿತನಾಗಿ, ಸ್ವಸ್ವರೂಪವನ್ನು ಕಂಡು, ತಾನೇ ತಾನಾಗಿ ಚತುರ್ಗತಿ ಭ್ರಮಣರೂಪವಾದ ಭವಚಕ್ರದಿಂದ ಬಿಡುಗಡೆ ಹೊಂದುತ್ತಾನೆಯೋ ಅಂತಹ ಆತ್ಮನೇ ಉತ್ಕೃಷ್ಟ ಆತ್ಮಪದವಿಗೇರಿ ಪರಮಾತ್ಮನೆಂದು ಕರೆಯಲ್ಪಡುತ್ತಾನೆ. ಈ ಪರಮಾತ್ಮ ಪದವಿಯಲ್ಲಿ ಎರಡು ಭೇದಗಳುಂಟು. 1. ಸಕಲ ಪರಮಾತ್ಮ, 2. ವಿಕಲ ಪರಮಾತ್ಮ.

**ಸಕಲ ಪರಮಾತ್ಮ** – ಅಧ್ಯಾತ್ಮ ವಿಕಾಸದ ಸರ್ವೋಚ್ಚ ಪದವಿಯನ್ನು ತಲುಪಿ, ಶುಕ್ಲಧ್ಯಾನದ ಸಾಧನೆಯಿಂದ ಜ್ಞಾನಾವರಣ, ದರ್ಶನಾವರಣ, ಮೋಹನೀಯ ಮತ್ತು ಅಂತರಾಯವೆಂಬ ಘಾತಿಕರ್ಮಗಳಿಂದ ಬಿಡುಗಡೆ ಹೊಂದಿ, ಅನಂತಜ್ಞಾನ, ದರ್ಶನ, ಸುಖ, ವೀರ್ಯವೆಂಬ ಅನಂತಚತುಷ್ಟಯಗಳನ್ನು ಹೊಂದಿ, ಆತ್ಮನು ಪವಿತ್ರನಾಗಿ ಜೀವನ್ಮುಕ್ತಾವಸ್ಥೆಯನ್ನು ಹೊಂದುವನು. ಈ ಪದವಿಯನ್ನು ಪಡೆದವರಿಗೆ ಸಕಲ ಪರಮಾತ್ಮರೆಂದು ಹೆಸರು. ಕರ್ಮಶತ್ರುಗಳನ್ನು ಗೆದ್ದುದರಿಂದ ಅರಿಹಂತನೆಂದೂ, ಧ್ಯಾನ, ದರ್ಶನ ಪೂಜೆಗಳಿಗೆ ಅರ್ಹನಾದ್ದರಿಂದ ಅರ್ಹನ್ ಎಂದೂ, ಮೂರು ಲೋಕದ ಆಗು ಹೋಗುಗಳನ್ನು ಕ್ಷಣಮಾತ್ರದಲ್ಲಿ ತಿಳಿಯುವ ಯೋಗ್ಯತೆ ಇರುವುದರಿಂದ ಸರ್ವಜ್ಞನೆಂದೂ, ಹಿತೋಪದೇಶಿ ಎಂದು ಮುಂತಾದ

ಸಾವಿರದೆಂಟು ಪವಿತ್ರವಾದ, ಅನ್ವರ್ಥಕನಾಮಧಾರಿಯಾದ ಪರಮಾತ್ಮನೇ ಸಕಲ ಪರಮಾತ್ಮ. ಈ ಪರಮಾತ್ಮರು ಜಗತ್ತಿನ ಜೀವಕೋಟಿಗೆ ಮುಕ್ತಿಮಾರ್ಗವನ್ನು ಬಿತ್ತರಿಸುವರು. ಇವರೇ ತೀರ್ಥಂಕರ ಪರಮೇಷ್ಠಿಗಳು. ಇವರಿಂದ ನಿರೂಪಿಸಲ್ಪಟ್ಟ ಶಾಸ್ತ್ರವೇ ಜೈನ ಸಿದ್ಧಾಂತ. ಜಿನರ, ಜೈನ ಶಾಸ್ತ್ರದ ಅನುಯಾಯಿಗಳೇ ಜೈನರು. ಜಿನರ ನಿರ್ವಿಕಾರ ಶಾಂತಮುದ್ರೆಯ ಅರಹಂತರ ಪ್ರತಿರೂಪದ ಮಾದರಿಯ ಮೂರ್ತಿಯನ್ನೇ ದೇವರೆಂದು ನಂಬಿ ಧ್ಯಾನಿಸಿ ಪೂಜಿಸುತ್ತಿದ್ದೇವೆ. ಇದರ ಉದ್ದೇಶವೆಂದರೆ, ಬಹಿರಾತ್ಮ ಭಾವನೆಯನ್ನು ತೊಲಗಿಸಿ, ಅಂತರಾತ್ಮ ಧ್ಯಾನಲೀನರಾಗಿ ಪರಮಾತ್ಮ ಪದವಿಯನ್ನು ಪಡೆಯುವ ಸಂಕೇತವಾಗಿದೆ.

**ವಿಕಲಪರಮಾತ್ಮ** – ಅರಹಂತ ಅವಸ್ಥೆಯಿಂದ ಮುಂದೆ ಉಳಿದಿರುವ ವೇದನೀಯ, ಆಯು, ನಾಮ ಮತ್ತು ಗೋತ್ರವೆಂಬ ಅಘಾತಿ ಕರ್ಮಗಳನ್ನು ಅಂದರೆ ದ್ರವ್ಯ, ಭಾವ ಮತ್ತು ನೋಕರ್ಮಗಳನ್ನು ಸುಟ್ಟು ಆತ್ಮ ಸ್ವರೂಪವೇ ತಾನಾದ ಸಚ್ಚಿದಾನಂದೈಕಸ್ವರೂಪಿಯಾದ ಸಿದ್ಧಪರಮೇಷ್ಠಿಗಳೇ ವಿಕಲಪರಮಾತ್ಮರು ಅಶರೀರಿಯಾದ ಈ ಚಿದಾತ್ಮಜ್ಯೋತಿಯು ಲೋಕದ ತುತ್ತ ತುದಿಯ ಸಿದ್ಧಶಿಲೆ ಎಂಬ ನೆಲೆಯನ್ನು ತಲುಪಿ, ಅನಂತ ಕಾಲದವರೆಗೂ ಶಾಶ್ವತ ಸುಖಿಯಾಗಿರುತ್ತದೆ. ಸಕಲ ದೋಷ, ಕರ್ಮಜಂಜಟಗಳಿಂದ ಬಿಡುಗಡೆಯಾದ ಪವಿತ್ರಾತ್ಮನು ಮತ್ತೆ ಜನ್ಮಾದಿಗಳನ್ನೆತ್ತುವುದೇ ಇಲ್ಲ.

ಈ ವಿಚಾರಸರಣಿಯಿಂದ ವೇದ್ಯವಾಗುವುದೇನೆಂದರೆ ಬಹಿರಾತ್ಮನು ಸಾಂಸಾರಿಕ ಜೀವನದ ಬಾಹ್ಯಾಡಂಬರದ ಪ್ರತಿನಿಧಿಯೂ, ಅಂತರಾತ್ಮನು ಸಾಧಕ ಜೀವನದ ಪ್ರತಿನಿಧಿಯೂ, ಪರಮಾತ್ಮನು ಆತ್ಮಸಿದ್ಧಿಯನ್ನು ಪಡೆದವನು ಎಂದೂ ನಿರ್ಣಯವಾಯಿತು. ಪ್ರತಿಯೊರ್ವನೂ ಈ ಒಂದೇ ಆತ್ಮನ ಅವಸ್ಥಾಶ್ರೇಣಿಯನ್ನು ತಿಳಿದು, ಜಘನ್ಯ, ಮಧ್ಯಮ, ಉತ್ತಮ ಪದವಿಗಳ ಅರಿವನ್ನು ಮಾಡಿಕೊಂಡು ಜಘನ್ಯವಾದ ಬಹಿರಾತ್ಮನ ಭಾವನೆಯನ್ನು ತ್ಯಾಜ್ಯಮಾಡಿ, ಅಂತರಾತ್ಮ ಸಾಧನೆಯಲ್ಲಿ ತೊಡಗಿ ಪರಮಾತ್ಮ ಪದವಿಗೇರಬಹುದು. ಇಂಥ ಸಾಧಕರು ಅನೇಕರು ಆಗಿಹೋಗಿದ್ದಾರೆ. ಜೈನಧರ್ಮದ ಸಿದ್ಧಾಂತವು ಇದನ್ನೇ ಬೋಧಿಸುತ್ತದೆ. ಇದೇ ಆತ್ಮಧರ್ಮದರ್ಪಣ.




ಚತುರ್ವಿಂಶತಿ ತೀರ್ಥಂಕರರು